SPECIAL MOTION.

Re: Merger of Goa with Mysore.

ಶ್ರೀ ಎ. ಜೆ. ದೊಡ್ಡಮೇಟಿ (ರೋಣ).—ಸ್ವಾಮಿ, ನಾನು ಈ ಕೆಳಗಿನ ನಿರ್ಣಯವನ್ನು ಈ ಮಾನ್ಯ ಸಭೆಯ ಮುಂದೆ ಮಂಡಿಸುತ್ತೇನೆ:

"ಗೋವಾವನ್ನು ಮಹಾರಾಷ್ಟ್ರದೊಂದಿಗೆ ವಿಲೀನೀಕರಣಗೊಳಿಸಬೇಕೆಂದು ಉದ್ದೇಶಿಸಿ ಮಹಾರಾಷ್ಟ್ರದ ಮುಖ್ಯ ಮಂತ್ರಿಗಳು ಸೂಚಿಸಿದ ಪ್ರಸ್ತಾವದ ಬಗ್ಗೆ ಆ ರಾಜ್ಯದ ವಿಧಾನ ಮಂಡಲದ ಉಭಯ ಸದನಗಳವರು 10-3-1965 ರಂದು ವಿಶೇಷ ಸಮಾವೇಶಗೊಂಡು ನಿರ್ಣಯವನ್ನು ಅಂಗೀಕರಿಸಿರುವುದನ್ನು ತಿಳಿದು ಈ ಸಭೆಗೆ ತೀವ್ರ ಆತಂಕವುಂಟಾಗಿದೆ. ಗೋವಾದ ಭವಿಷ್ಯದ ವಿಷಯವನ್ನು ತಮ್ಮಿಷ್ಟಕ್ಕೆ ತಾವೇ ನಿರ್ಧರಿಸಿಕೊಳ್ಳುವ ಹಕ್ಕು ಗೋವಾ ಜನರಿಗಿರತಕ್ಕದೆಂದು ದಿವಂಗತ ಪ್ರಧಾನಿ ಜವಹರಲಾಲ್ ನೆಹರೂರವರು ವಿಧಾಯಕ ಮಾಡಿದ್ದ ಕಾರ್ಯನೀತಿಯನ್ನು ಈ ನಿರ್ಣಯವು ತಿರಸ್ಕರಿಸಿದಂತಾಗಿದೆ. ಗೋವಾದ ಇತಿಹಾಸ, ಸಂಸ್ಕೃತಿ, ಭಾಷೆ- ಭೌಗೋಳಿಕ ಸನ್ನಿವೇಶ ಮತ್ತು ಆರ್ಥಿಕ ದೃಷ್ಟಿಗಳನ್ನು ಗಣನೆಗೆ ತೆಗೆದುಕೊಂಡಲ್ಲಿ ಇವೆಲ್ಲವೂ ಗೋವಾವನ್ನು ಮಹಾರಾಷ್ಟ್ರ ರಾಜ್ಯದಲ್ಲಿ ವಿಲೀನೀಕರಣಗೊಳಿಸುವುದಕ್ಕೆ ಬದಲಾಗಿ ಕರ್ಣಾಟಕದಲ್ಲಿ ವಿಲೀನೀಕರಣಗೊಳಿಸುವುದನ್ನು ಸಮರ್ಥಿಸುತ್ತವೆ. ಗೋವಾದ ಭವಿಷ್ಯದ ಬಗ್ಗೆ ದಿವಂಗತ ಪ್ರಧಾನಿಯವರು ವಿಧಾಯಕ ಮಾಡಿದ ಕಾರ್ಯನೀತಿಯನ್ನು ಸಂಬಂಧಪಟ್ಟ ಜನರೆಲ್ಲರೂ ಶಬ್ದಾರ್ಥದಲ್ಲೂ, ಭಾವಾರ್ಥದಲ್ಲೂ ಗೌರವಿಸಬೇಕೆಂಬುದು ಈ ಸಭೆಯ ವಿಚಾರಪೂರ್ಣ ಅಭಿಪ್ರಾಯವಾಗಿದೆ. ಆದ್ದರಿಂದ, ತಮ್ಮ ಭವಿಷ್ಯವನ್ನು ನಿರ್ಧರಿಸಿಕೊಳ್ಳುವ ಹಕ್ಕು ಗೋವಾ ಜನತೆಗಿರಬೇಕೆಂದೂ ಈ ಉದ್ದೇಶದ ಸಲುವಾಗಿ ಅದು ಸ್ವತಂತ್ರವಾದ ದಿನಾಂಕದಿಂದ ಹತ್ತು ವರ್ಷಗಳವರೆಗೆ ಸ್ವಯಂ ಆಡಳಿತದಲ್ಲಿರಬೇಕೆಂದೂ, ಈ ಸಭೆಯವರು ಸ್ಪಷ್ಟವಾಗಿ ಹಾಗೂ ಒತ್ತಾಯಪೂರ್ವಕವಾಗಿ ಅಭಿಪ್ರಾಯಕೊಡುತ್ತಾರೆ. ಆದಾಗ್ಯೂ, ಗೋವಾವನ್ನು ಬೇಗನೆ ವಿಲೀನೀಕರಣಗೊಳಿಸಬೇಕೆಂಬ ಬಗ್ಗೆ ಕಾರ್ಯನೀತಿಯನ್ನೇನಾದರೂ ಬದಲಾಯಿಸುವುದಾದಲ್ಲಿ, ಅದನ್ನು ಮೈಸೂರಿನೊಂದಿಗೇ ವಿಲೀನೀಕರಣಗೊಳಿಸಬೇಕೆಂದು ಈ ಸಭೆ ತೀವ್ರವಾಗಿ ಒತ್ತಾಯಪಡಿಸುತ್ತದೆ."

Mr. SPEAKER.—I would rather read in English. Motion moved.

"That this House notes with deep concern the Resolution adopted by the two Houses of the Maharashtra State Legislature at a special sitting on 10th March 1965 on the motion of the Chief Minister of that State proposing the merger of Goa with Maharashtra. This resolution amounts to a negation of the policy laid down by the late Prime Minister Jawaharlal Nehru that the people of Goa should have the right of self, determination as to its future. Every consideration bearing on the history, culture, language, geography and economy of Goa would support its merger with Karnataka rather than with Maharashtra. It is nevertheless the considered opinion of this House that the policy laid down by the late Prime Minister concerning the future of Goa should be honoured both in letter and in spirit by all concerned This House is therefore clearly and emphatically of opinion that the people of Goa should have the right to determine their future and to that end Goa should continue to have self-government for a period of ten years from the date of liberation of Goa. If, however, there is to be any change in the policy in favour of early merger of Goa, this House strongly urges that such merger must be only with Mysore."

Sri B. R. SUNTHANKAR (Belgaum City).—A point of order, Sir....

Mr. SPEAKER.—Yes, What is that point of order ?

SRI B. R. SUNTHANKAR.—This cannot be discussed, Sir. I have got to maintain Rule 14-, sub-rule (6). It says the matter which has already been discussed cannot be discussed again in the same session. Sir, in the present session, a non-official resolution moved by Sri Ganji Veerappa was discussed. Therefore, this special motion cannot be taken up for discussion in the same session. According to rule 272 (2), the Speaker may disallow any motion or part of a motion on the ground that it relates to a matter which is not primarily the concern of the State Government. The subject matter is not a primary concern of the State. Whether Goa should remain as it is for ten years from the date of liberation, or not is not of primary importance or concern of this House.

9-30 A.M.

Under these two Rules, I think that this Special Motion is not in order and this House cannot discuss this Resolution.

SRI V. S. PATIL (Belgaum I).—Sir, I feel that the present point of order raised by my friend, Mr. Sunthankar is really a genuine one and has got some support. Of course, it will depend upon your interpretation. According to me, sub-clause (6) of Rule 14.) is very clear. "It shall not revive discussion of a matter which has been discussed in the same Session". Here, practically, the substance is the same that Goa should be kept as an entity for a period of 10 years. That is being discussed here. I may say, it is discussed, but the discussion is not over. The Resolution is not either passed or rejected. The wording of the Rule is: "It is the revival of the question of the matter" it is not "whether the matter is finally decided or not". If it is discussed, then a similar Resolution cannot be brought on the Floor of the House. So, that has got some meaning. There is that non-official Resolution on the Table of the House. I do not understand why that was not discussed and why it is replaced by some other Motion?

Further, Rule 272 (2) is a very solid ground, because, we are not expected to waste or spend the time of this House most valuable time in terms of money also in discussing a matter with this Government has nothing to do. Whether Goa is to be kept as a separate entity, whether it is to be merged here or there or whatever it is, this Government has absolutely nothing to do with it. As a party—Congress Party as such—they may discuss this in their Party, because the Party is ruling the country, which has given its opinion to the Central Parliamentary Board or the authority at the Centre. But, we must distinguish between a Party and the Government. Our powers are restricted so far as the territories of this State are concerned and that is why this Rule is here that we should not go on discussing matters which are not the primary concern of the State Government. May I know what is the concern of this State so far as the future of Goa is concerned? Are they in any way connected with the Government of Goa? Maharashtra has done something. That does ot mean that you should do it. Maharashtra committed it because the Goa Assembly passed the Resolution to accept it as an intergal part of Maharashtra. That is not the case here. Goa has not

(SRI V. S. PATIL)

even touched the question of Mysore or the Government of Mysore. So far as this point is concerned, it is a very important point, and I request you, Sir, to use your powers to over-rule this particular Resolution to save the valuable time of this House.

MR. SPEAKER.—Hon'ble Member, Sri B. R. Sunthankar, has raised two arguments in support of the Point of Order raised by him. He refers to Rule 148, sub-clause (vi). He said that the discussion is being revived and therefore it should not be permitted and the Rule should be upheld. Sri V. S. Patil felt that it is a genuine argument or point. I regret, I am unable to accept it. The discussions they have contemplated under that Rule are concluded discussions, deliberated upon finally and a Resolution or matter concluded by an expression of opinion by the House. Till then, you cannot say that discussions are over. This becomes very clear when you rivet attention on the other word 'revive' not 'continued'. A revival is of a closed and finished thing. There is noting like a thing which is still continued. The mover of the Motion has not concluded his speech. The House has not become possessed of that further debate at all. If we say that the discussions are over, I must say with all respect to the Hon'ble Members that there is absolutely no merit in it.

I will then deal with the other point, *viz.*, that whether it is not possible for the Speaker, under Rule 272 (2) to disallow it. In order that the Speaker's powers may be invoked, that he should disallow a Motion which is before the House, is something which is pre-supposing certain terms—that a Resolution is before the House and it is liable to be discussed and at this stage the Speaker must exercise his power and say: "I disallow" or "I wont allow" so that there may be very solid reasons for disallowing it. It is the primary duty of any House to discuss any matter. When it is not as per Constitution, then alone I should say that the matter should not be discussed. The ground appears to be no ground, much less solid, for the reason, how far the result affects or helps the State of Goa or the Central Government or a sister State like Maharashtra, is not for me to decide. *Prima facie* it appears to me to be relevant and I am emboldened to say the this though the action of a sister Legislature, where a Speaker like me presides and his opinion is not binding on me and my opinion is not binding on him. When the Speaker of a sister Legislature opined in the manner he did and permitted the Chief Minister to move the subject on the Floor of that Legislature, that I should be called upon to deny a similar right to the Members of this Legislature to exercise their rights and to ask me to use my discretion to prevent it, is not proper. If it is a relevant matter it has to be discussed. Whether the discussion is proper or argument is not proper is no concern of a Speaker. The Resolution has given notice of; it has been admitted for being placed on the Agenda, and at this stage I am asked to say that it should be disallowed. How can I disallow when it is moved? The Member read out the Motion.

At that stage alone, why did not the Member help me by saying that the House is incompetent and the Speaker is lesss competent and, therefore the matter cannot be raised ? These are all ideas which are wholly foreign. I am not analysing the motives or reasons of both the Members to raise the point of order. With all respect, I must disallow it saying that there is no merit in it.

Sri C. J. MUCKANNAPPA (Sira).—Sir, with regard to this Resolution, we do not know many matters.

Mr. SPEAKER.—If there is further information that is wanted, there is ample time.

Sri C. J. MUCKANNAPPA.—The Resolution does not contain the full facts. That is why I request the Chair to kindly allow some time to the Members to collect the information, either for or against. I am eager to speak on this Motion.

Mr. SPEAKER.—Why did not the Hon'ble Member tell me before hand ?

Sri C. J. MUCKANNAPPA.—Yesterday evening only you said that there is a slight change in the programme. I request that some time should be given to collect the information.

Mr. SPEAKER.—Time to be given without adjournment is not something which I can apprehend.

ಶ್ರೀ ಎ. ಜೆ. ದೊಡ್ಡಮೇಟಿ.—ಸ್ವಾಮಿ, ಈ ನಿರ್ಣಯವನ್ನು ನಾನು ಕೇವಲ ಕನ್ನಡಿಗನೆಂಬ ಭಾವನೆಯಿಂದ ಮಂಡಿಸುತ್ತಾ ಇಲ್ಲ. ನಾನು ಅಥವಾ ನಾವು ಮೊದಲು ಭಾರತೀಯರು, ನಂತರ ಕನ್ನಡಿಗರು ಅಥವಾ ಮಹಾರಾಷ್ಟ್ರೀಯರು ಎಂಬ ದೃಷ್ಟಿಯಿಂದ ವಿಚಾರ ಮಾಡಬೇಕು ಅರ್ಥಾತ್ ಈ ನಿರ್ಣಯವನ್ನು ಪರಿಶೀಲನೆ ಮಾಡುವಾಗ್ಗೆ ನಾವು ಭಾರತೀಯ ಪ್ರಜೆಗಳು ಎಂಬುವ ಒಂದು ದೃಷ್ಟಿಯನ್ನು ಮರೆಯದೇ, ವಿಚಾರ ಮಾಡಬೇಕಾಗಿದೆ.

Sri V. S. PATIL.—In order to understand the Hon'ble Member fully, we request him to speak in English.

ಶ್ರೀ ಎ. ಜೆ. ದೊಡ್ಡಮೇಟಿ.—ಅವರು ನನ್ನ ಜೊತೆಯಲ್ಲೇ ಮುಂಬೈ ಅಸೆಂಬ್ಲಿಯಲ್ಲಿ ಇದ್ದರು.

Sri V. M. DEO (Gubbi).—Arrangements may at least be made for immediate translation of the Kannada speech into English, Sir.

Mr. SPEAKER.—Let the House not be disturbed. The Hon'ble Member is not in his seat.

ಶ್ರೀ ಎ. ಜೆ. ದೊಡ್ಡಮೇಟಿ.—ಸ್ವಾಮಿ, ಭಾರತದ ಹಿತಕ್ಕೆ ಮತ್ತು ಭಾರತದ ಗೌರವಕ್ಕೆ, ಭಾರತದ ಒಗ್ಗಟ್ಟಿಗೆ ಮಹಾರಾಷ್ಟ್ರ ಸಭೆಯವರು ನಿರ್ಣಯಿಸಿದ ನಿರ್ಣಯ ಯಾವ ರೀತಿ ಆತಂಕವಾಗಿದೆ ಎಂಬುದನ್ನು ನಾವು ವಿಚಾರ ಮಾಡಬೇಕಾಗಿದೆ, ಅದನ್ನು ನಾವು ವಿಚಾರ ಮಾಡಿದ್ವೀ ಆದರೆ........

ಅಧ್ಯಕ್ಷರು.—ನನ್ನ ಅಭಿಪ್ರಾಯದ ಪ್ರಕಾರ ಮಹಾರಾಷ್ಟ್ರದವರು ಏನು ಮಾಡಿದ್ದಾರೆ ಎಂಬುದನ್ನು ಹೆಚ್ಚಾಗಿ ವಿವರಿಸುವುದು ಬೇಡ. ಅವರು ಹೇಳಿದ ವಾದ ಸರಿಯೇ ಅಲ್ಲವೇ ಎಂದು ಉತ್ತರ ಕೊಡಲಿಕ್ಕೆ ಅವರು ಇಲ್ಲಿ ಇಲ್ಲ. ಅದ್ದರಿಂದ ನಮ್ಮ ಅಭಿಪ್ರಾಯ ಏನಿದೆ ಅದಕ್ಕೆ ಕುರಿತಾಗಿ ಅಂಕಿ ಅಂಶ ಹೇಳಬಹುದೇ ವಿನಾ ಮಹಾರಾಷ್ಟ್ರದವರು ಏಕೆ ಮಾಡಿದರು ಎಂದು ಹೇಳುವುದು ಬೇಡ. We must not depend upon press reports for what has happened elsewhere. We must take note of the fact and then proceed.

Sri C. J. MUCKANNAPPA.—How can we adjust for the Maharashtra Legislature or Maharashtra Government here ? We have to believe Press reports. When a particular Member has got certain information and if he has got belief and faith in that information, I request the Hon'ble Chair to permit him to read.

Mr. SPEAKER.—All that I said was I do not want to have any criticism on the Floor of the House with regard to Maharashtra Legislature. It is a sovereign body.

Sri G. V. GOWDA (Palya).—What is done elsawhere is a fact. It is not open to us to comment ?

Mr. SPEAKER.—Not that this House should not mention what has happened elsewhere. But if the member say that in the Maharashtra Legislature they have debated like this, then it is not proper for me to allow. But they say that such a thing has been done. Why they have done and how they have done, about all those things there should be no discussion. Whatever the members want to say they must say in support of the resolution, not with regard to the conduct of the Maharashtra Legislature or arguments in support of it.

Sri N. O. SAMAJI (Belgaum II).—Spoke in Marathi)

Mr. SPEAKER.—I disallow it. There is no merit in that.

ಶ್ರೀ ಎ. ಜೆ. ದೊಡ್ಡಮೇಟಿ.—ನಾನು ಮಹಾರಾಷ್ಟ್ರ ವಿಧಾನ ಮಂಡಲಗಳಿಗೆ ನಮ್ಮ ವಿಧಾನ ಮಂಡಲಕ್ಕೆ ಎಷ್ಟು ಗೌರವವನ್ನು ಹೊಂದಿದ್ದೇನೆಯೋ ಅಷ್ಟೇ ಗೌರವವನ್ನು ಹೊಂದಿದ್ದೇನೆ. ಆ ದೃಷ್ಟಿಯಿಂದ ಆ ವಿಧಾನ ಮಂಡಲಗಳ ಬಗ್ಗೆ ಸಂಪೂರ್ಣ ಗೌರವವನ್ನು ಸೂಚಿಸಿ ಮಹಾರಾಷ್ಟ್ರ ಸರ್ಕಾರ ಯಾವ ಧೋರಣೆಯನ್ನನುಸರಿಸಿ ನಿರ್ಣಯವನ್ನು ಮಾಡಿತೋ ಅದನ್ನು ಈ ನಿರ್ಣಯದಲ್ಲಿ ಸೂಚಿಸಲಾಗಿದೆ, ಮಹಾರಾಷ್ಟ್ರದ ಗೋವೆಯ ಬೇಡಿಕೆಯ ಬಗ್ಗೆ ಅನುಸರಿಸಿದ ನೀತಿಯು ಯಾವ ರೀತಿಯಿಂದಲೂ ಸಮರ್ಥನೀಯವಲ್ಲ, ಇಷ್ಟೇ ಅಲ್ಲ. ಅದು ಸಂಪೂರ್ಣ ಅಸಮರ್ಥನೀಯ ಎಂಬುದನ್ನು ಹೇಳಲಿಕ್ಕೆ ನಾನು ಮೊದಲು ಅಪೇಕ್ಷೆಪಡುತ್ತೇನೆ. ಮಹಾರಾಷ್ಟ್ರದ ನಿರ್ಣಯದಲ್ಲಿ ಅವರು ಗೋವೆಯನ್ನು ಈ ಮುಂದಿನ ಕಾರಣಗಳಿಗಾಗಿ ಮಹಾರಾಷ್ಟ್ರದಲ್ಲಿ ಸೇರ್ಪಡೆ ಮಾಡಬೇಕೆಂದು ಹೇಳಿದ್ದಾರೆ: ಅದರಲ್ಲಿ ಮುಖ್ಯವಾದ ಕಾರಣವೆಂದರೆ, ಗೋವೆ ಆರ್ಥಿಕ ಪುನರುತ್ಥಾನವಾಗಬೇಕಾದರೆ ಮಹಾರಾಷ್ಟ್ರದಲ್ಲಿ ಅದು ಸೇರಬೇಕು. ಗೋವಾ ಭೌಗೋಲಿಕವಾಗಿ ಸಮಗ್ರವಾಗಿ ಇದಕ್ಕೆ ಅವಿಭಾಜ್ಯವಾಗಿದೆ. ಭಾಷೆಯ ದೃಷ್ಟಿಯಿಂದ, ಸಂಸ್ಕೃತಿಯ ದೃಷ್ಟಿಯಿಂದ ಗೋವಾ ಮಹಾರಾಷ್ಟ್ರದೊಡನೆ ಸಮನ್ವಯ ಹೊಂದಿದೆ, ನಾಲ್ಕನೆಯದು ಮೊನ್ನೆ ನಡೆದ ಚುನಾವಣೆಗಳ ಫಲಿತಾಂಶ, ಗೋವೆಯು ಮಹಾರಾಷ್ಟ್ರದೊಡನೆ ಸಮ್ಮಿಲನವಾಗುವುದಕ್ಕೆ ಅನುಮತಿಯನ್ನು ಇತ್ತಿದೆ. ಹೀಗೆ ಕೆಲವು ಕಾರಣಗಳನ್ನು ಕೊಟ್ಟು ಅಲ್ಲಿ ಆ ನಿರ್ಣಯವನ್ನು ಮಾಡಿದ್ದಾರೆ. ಆ ಕಾರಣಗಳಲ್ಲಿ ಎಷ್ಟು ಶಕ್ತಿ ಇದೆ ಎಂಬುದನ್ನು ನಾವು ನೋಡುವಾ.

ಸ್ವಾಮಿ, ಆರ್ಥಿಕ ಪುನರುತ್ಥಾನದ ಬಗ್ಗೆ ವಿಚಾರಿಸಿದಲ್ಲಿ ಗೋವೆಯು ಒಂದುವೇಳೆ ಮಹಾರಾಷ್ಟ್ರದಲ್ಲಿ ವಿಲೀನವಾದರೂ ಕೂಡ ಅದರ ಆರ್ಥಿಕ ಪುನರುತ್ಥಾನ ಮಹಾರಾಷ್ಟ್ರ ಸರಕಾರದಿಂದ ಆಗುವಂತಿಲ್ಲ. ಅದು ಮಹಾರಾಷ್ಟ್ರಕ್ಕೆ ಅಷ್ಟು ಆಗತ್ಯದ ಕೇಂದ್ರವಾಗಿ ಇಲ್ಲ. ಗೋವೆಯು ತನ್ನ ಆರ್ಥಿಕನೀತಿಯನ್ನು ರೂಪಿಸಿಕೊಳ್ಳುವಾಗ ಯಾವ ಪ್ರದೇಶದಲ್ಲಿ ತನ್ನ ವ್ಯಾಪಾರ ಉದ್ಯಮಗಳಿಗೆ ಸ್ವಾಭಾವಿಕ ಅನುಕೂಲವಿದೆ ಎಂಬುದನ್ನು ಅದು ನೋಡಬೇಕಾಗುತ್ತದೆ. ಈ ದೃಷ್ಟಿಯಿಂದ ಪರಿಶೀಲಿಸಿದರೆ ಈ ನಕ್ಷೆಯನ್ನು ನೋಡಿದರೆ ಗೋವೆಯು ಮಹಾರಾಷ್ಟ್ರಕ್ಕೆ ಮತ್ತು ಕರ್ಣಾಟಕಕ್ಕೆ ಎಷ್ಟು ಎಷ್ಟು ಹೊಂದಿಕೊಂಡಿದೆ ಎಂಬುದು ಸ್ಪಷ್ಟವಾಗುತ್ತದೆ. (ಹಾಗೆ ಹೇಳಿ ಕೈಲಿ ನಕಾಶೆಯನ್ನು ತೋರಿಸಿದರು.) ನೂರಕ್ಕೆ 80 ಅಂಶ ಕರ್ಣಾಟಕಕ್ಕೆ ಹೊಂದಿಕೊಂಡು ಕೇವಲ ಸೇಕಡ 20ರಷ್ಟು ಮಾತ್ರ ಮಹಾರಾಷ್ಟ್ರಕ್ಕೆ ಹೊಂದಿಕೊಂಡಿದೆ. ಅದೂ ರತ್ನಗಿರಿಯ ಮೂಲಕ ಈ ರೀತಿ ಇರುವಾಗ ಮಹಾರಾಷ್ಟ್ರ ಸರಕಾರ ಯಾವ ರೀತಿಯಲ್ಲೂ ಸಹಾಯಮಾಡಲು ಸಾಧ್ಯವಾಗಲಾರದು. ನಿಮಗೆ ಬಹಳಷ್ಟು ಸಹಾಯ ಮಾಡುತ್ತೇವೆ ಆರ್ಥಿಕ ಸಹಾಯಮಾಡುತ್ತೇವೆ, ಉದ್ಧಾರಮಾಡುತ್ತೇವೆ, ಸ್ವರ್ಗ ತರುತ್ತೇವೆ ಎಂದು ಮುಂತಾಗಿ ಮಹಾರಾಷ್ಟ್ರದವರು ಹೇಳಿದ್ದಾರೆ. ಆದರೆ ಅದು ಎಷ್ಟರಮಟ್ಟಿಗೆ ನಿಜ ; ಹಾಗೂ ಸಾಧ್ಯ ಎಂಬುದನ್ನು ನೋಡಬೇಕಾಗಿದೆ. ಸಹಾಯಮಾಡಬೇಕೆಂಬ ಇಚ್ಛೆ ಇದ್ದರೂ ಅವರಿಗೆ ಸಾಧ್ಯವಿಲ್ಲ. ಯಾಕೆಂದರೆ ಗೋವೆ ಮಹಾರಾಷ್ಟ್ರದ ಬಾಲದ ತುದಿ. ಆದರೆ ಕರ್ಣಾಟಕದಲ್ಲಿ ಗೋವೆ ವಿಲೀನವಾಗುವುದರಿಂದ ಅದರ ಆರ್ಥಿಕಸ್ಥಿತಿ ಉತ್ತಮಗೊಳ್ಳುತ್ತದೆ. ಗೋವೆ ಕರ್ಣಾಟಕದ ಆಯಕಟ್ಟಿನ ಸ್ಥಳವಾಗಿ ಅದರ ಅನಿವಾರ್ಯ ಬಂದರವಾಗಿದೆ. ಗೋವೆಯ ಬಂದರು ಪೂರ್ವದಲ್ಲಿ ಕನ್ನಡ ನಾಡಿನ, ಸಂಪರ್ಕದ ಬಂದರಾಗಿತ್ತು. ಆ ಮೂಲಕ ಕರ್ಣಾಟಕದ ವ್ಯವಹಾರ ನಡೆಯಬೇಕಾಗಿತ್ತು. ಹಾಗೆ ನಡೆಸಲು ಗೋವೆ ಅತ್ಯಂತ

ಅವಶ್ಯಕವಾಗಿತ್ತು; ಇಂದೂ ಮುಂದೂ ಇದು ಅನಿವಾರ್ಯ; ಅನಾದಿ ಕಾಲದಿಂದಲೂ ಕೂಡ ಗೋವೆಗೆ ನಮ್ಮ ರಾಜ್ಯದಿಂದ ರಸ್ತೆ ಸಂಪರ್ಕವಿಲ್ಲದಿರುವಾಗಲೂ ಕೂಡ ಎತ್ತು ಚಕ್ಕಡಿ ಮೇಲೆ ಮತ್ತು ಗಾಡಿ ಬಂಡಿಗಳಲ್ಲಿ ಗೋವೆಗೆ ಸಾಮಾನು ಸಾಗಾಣಿಕೆ ನಡೆಯುತ್ತಿತ್ತು. ಧಾರವಾಡ ಮತ್ತು ಬೆಳಗಾಂ ಜಿಲ್ಲೆಗಳ ಮೂಲಕ ಗೋವೆಗೆ ಹೋಗಬೇಕಾಗಿತ್ತು. ಆದರೆ ಮಹಾರಾಷ್ಟ್ರದಿಂದ ಗೋವಾಕ್ಕೆ ಸಾಮಾನು ಸಾಗಣಿಕೆ ಇರುತ್ತಿರಲಿಲ್ಲ. ಗೋವೆಗೆ ಆರ್ಥಿಕವಾಗಿ ಬೆಳವಣಿಗೆಯಾಗಬೇಕಾದರೆ ಮತ್ತು ಸಾಂಸ್ಕೃತಿಕವಾಗಿ ಅದರ ವೈಶಿಷ್ಟ್ಯ ಉಳಿಸಿಕೊಳ್ಳಬೇಕಾದರೆ ಕರ್ಣಾಟಕದೊಡನೆ ಗೋವ ವಿಲೀನವಾಗಬೇಕಾದ್ದು ಅವಶ್ಯ. ಮಹಾರಾಷ್ಟ್ರದ ಮಿತ್ರರು ಭೌಗೋಳಿಕವಾಗಿ ಗೋವಾ ಮಹಾರಾಷ್ಟ್ರದ ಅವಿಭಾಜ್ಯ ಪ್ರದೇಶ ಎಂದು ಹೇಳಿದ್ದಾರೆ. ಶೇಕಡ 20 ರಷ್ಟು ಹೊಂದಿದ ಭೂಮಿ ಹೇಗೆ ಅವಿಭಾಜ್ಯವಾಗಬಹುದು? ಉಳಿದ ಸೇಕಡ 80 ಭಾಗ ಹೊಂದಿದ ಗೋವೆ ಕರ್ಣಾಟಕದ ಅವಿಭಾಜ್ಯ ಪ್ರದೇಶವಾಗಿದೆ. ಈ ದೃಷ್ಟಿಯಿಂದ ಅವಿಭಾಜ್ಯವೆಂದು ಮಹಾರಾಷ್ಟ್ರದವರು ಹೇಳುವುದನ್ನು ಒಪ್ಪುವುದಕ್ಕಾಗುವುದಿಲ್ಲ; ಆ ವಾದ ನಿಲ್ಲುವುದಿಲ್ಲ. ಇನ್ನು ಭಾಷಾ ದೃಷ್ಟಿಯಿಂದ ಕೊಂಕಣಿ ಭಾಷೆ ಮರಾಠಿಯ ಉಪಭಾಷೆ ಎಂದು ಮಹಾರಾಷ್ಟ್ರದವರು ಹೇಳುತ್ತಾರೆ. ಅದು ನಿಜವಾಗಿಯೂ ಸರಿಯಲ್ಲ. ಈ ಕಾರಣವನ್ನು ಪ್ರತಿಪಾದಿಸಿ ಕೊಂಕಣಿ ಮಾತನಾಡುವವರು ಮರಾಠಿಯವರು ಎಂದು ಹೇಳುವುದು ಸುತರಾಂ ಸರಿಯಲ್ಲ! 1960 ನೆಯ ಇಸವಿ ಅಂಕಿಸಂಖ್ಯೆ ನೋಡಿದರೆ ಕೊಂಕಣಿ ಮಾತನಾಡುವವರು 97,227 ಜನರಿದ್ದರೆ ಮರಾಠಿ ಮಾತನಾಡುವವರು 9,142 ಜನರಿದ್ದಾರೆ. ಹೀಗೆ ಪ್ರತ್ಯೇಕ ಅಸ್ತಿತ್ವ ಹೊಂದಿದ್ದನ್ನು ನೋಡಿದರೆ ಕೊಂಕಣಿ, ಮರಾಠಿಯ ಉಪಭಾಷೆಯಲ್ಲ ಎಂಬುದು ಸ್ವಯಂವೇದ್ಯವಾಗುತ್ತದೆ. ಕೊಂಕಣಿಗೇ ಪ್ರತ್ಯೇಕ ಸಂಸ್ಕೃತಿ ಉಂಟು. ಮಹಾರಾಷ್ಟ್ರದೊಂದಿಗೆ ಗೋವಾ ಸೇರಿದರೆ ಅದು ಉಳಿಯುವುದಿಲ್ಲ. ಏಕೆಂದರೆ ಕೊಂಕಣಿ ಮರಾಠಿಯ ಉಪಭಾಷೆ ಎಂದು ಮಹಾರಾಷ್ಟ್ರೀಯರು ಹೇಳುತ್ತಿದ್ದಾರೆ. ಕೊಂಕಣಿ ನಿಲ್ಲಿಸಿ ಮರಾಠಿ ಭಾಷೆಯನ್ನೇ ಉಪಯೋಗಿಸಿ ಎಂದು ನಾಳೆ ಅವರು ಕೊಂಕಣಿಯವರಿಗೆ ಹೇಳಬಹುದು, ಒತ್ತಾಯಮಾಡಬಹುದು. ಕೊಂಕಣಿಯು ಕನ್ನಡದ ಉಪಭಾಷೆ ಎಂದು ನಾನು ಹೇಳುವುದಿಲ್ಲ. ಅದು ಸ್ವತಂತ್ರವಾಗಿ ಬೆಳೆದ ಭಾಷೆ. ಆ ಭಾಷೆಯು ಲಿಪಿ ಯೋಚನೆಮಾಡಿರಲಿಕ್ಕಿಲ್ಲ. ಅನೇಕರು ಕನ್ನಡವನ್ನು ಕೆಲವರು ದೇವನಾಗರಿಯನ್ನು ಅದರ ಲಿಪಿಯಾಗಿ ಬಳಸುತ್ತಾರೆ. ಪೋರ್ಚುಗೀಸರು ಬಂದಮೇಲೆ ರೋಮನ್ ಲಿಪಿ ಬಳಸಿಕೊಂಡಿದ್ದಾರೆ ಇದನ್ನೆಲ್ಲಾ ನೋಡಿದರೆ ಜಗತ್ತಿನ ಯಾವ ನ್ಯಾಯಾಸ್ಥಾನದಲ್ಲಿ ನಿರ್ಣಯಮಾಡುವುದಾದರೂ ಮರಾಠಿ ಉಪಭಾಷೆ ಕೊಂಕಣಿಯಾಗುವುದಿಲ್ಲವೆಂದು ನಿರ್ಣಯಿಸಬಹುದಾಗಿದೆ ಇದಕ್ಕಿರುವ ನಾನಾ ಕಾರಣಗಳನ್ನು ಬೇಕಾದರೆ 4 ಗಂಟೆ ಕಾಲ ನಾನು ಚರ್ಚೆಮಾಡಬಹುದು. ಆದರೆ ಈಗ ಅಷ್ಟು ವೇಳೆ ಇಲ್ಲ. ಹೀಗೆ ಭಾಷೆಯ ದೃಷ್ಟಿಯಿಂದ ಸಾಮೀಪ್ಯದ ಸಂಬಂಧವನ್ನು ಹೇಳುವುದು ಸತ್ಯಕ್ಕೆ ದೂರವಾದ ಮಾತು ಇದನ್ನು ಸಭೆಯು ವಿಚಾರ ಮಾಡಬೇಕು. ನಿರ್ವಿಕಾರ ದೃಷ್ಟಿಯಿಂದ ಸತ್ಯಶೋಧನೆ ಮಾಡಿದರೆ ಭೌಗೋಳಿಕವಾಗಿಯಾಗಲಿ, ಭಾಷಾದೃಷ್ಟಿಯಿಂದಲಾಗಲಿ ಗೋವೆ ಮಹಾರಾಷ್ಟ್ರಕ್ಕೆ ಸೇರಬೇಕೆಂಬುದು ಸಾಧ್ಯವಿಲ್ಲದಂಥ ಮಾತು. ಮಹಾರಾಷ್ಟ್ರಕ್ಕೆ ಬೇರೆ ಬೇರೆ ಬಂದರುಗಳುಂಟು. ಮುಂಬಯಿ ಅಂಥ ಒಂದು ದೊಡ್ಡ ಬಂದರಾಗಿದೆ. ಆದ್ದರಿಂದ ಗೋವೆ ಜನರು ಮಹಾರಾಷ್ಟ್ರಕ್ಕೆ ಸೇರಿದರೆ ಮುಂದೆ ಅವರಿಗೆ ನಷ್ಟವೆಂಬುದು ಶತಸಿದ್ಧ. ಯಾಕೆಂದರೆ ತನ್ನ ಬಂದರಿನ ಮೂಲಕವೇ ಗೋವೆಯು ಮುಖ್ಯವಾಗಿ ಸಂಪತ್ಸಾಧನೆ ಮಾಡಿಕೊಳ್ಳಬೇಕಾಗಿದೆ, ಅದಕ್ಕಾಗಿ ಗೋವೆಯವರೇ ಮಹಾರಾಷ್ಟ್ರ ವಿಲೀನವನ್ನು ವಿರೋಧಿಸುತ್ತಾರೆ. ಅದು ಮಹಾರಾಷ್ಟ್ರದಲ್ಲಿ ಬಾಲದ ತುದಿ ಆಗುವುದರಿಂದ ಆರ್ಥಿಕವಾಗಿ ದುರ್ಲಕ್ಷವಾಗುವುದು ಸಹಜ. ಮುಂಬಯಿಯಂಥ ದೊಡ್ಡ ಬಂದರನ್ನು ಬಿಟ್ಟು ಗೋವೆಗೇಕೆ ಅವರು ಬರುತ್ತಾರೆ! ಬರುವುದಿಲ್ಲ. ನಾವು ದಿನಬೆಳಗಾದರೆ 10 ಮೈಲಿ ದೂರದಲ್ಲಿರುವುದರಿಂದ ಗೋವೆಗೆ ಹೋಗಬೇಕಾಗುತ್ತದೆ. ಆ ಕಾರಣದಿಂದ ಗೋವೆಯವರು ತಮ್ಮ ಆರ್ಥಿಕ ಬೆಳವಣಿಗೆಯನ್ನು ಬಯಸುವುದಾದರೆ ಕರ್ಣಾಟಕದಲ್ಲೇ ಉಳಿಯಲು ಅವರು ಮನಸ್ಸು ಮಾಡಬೇಕು. ಆ ದೃಷ್ಟಿಯಿಂದ ಅವರು ವಿಚಾರಮಾಡಬೇಕು.

Mr. SPEAKER.—I know that it is a sensitive question with regard to some members.

Sri V. S. PATIL.—Why some? It is in regard to all. Otherwise the resolution would not have come here.

Mr. SPEAKER.—Not me.

ಶ್ರೀ ಎ. ಜೆ. ದೊಡ್ಡಮೇಟಿ.—ಇನ್ನು ಗೋವೆಯ ಚುನಾವಣೆ ವಿಷಯ.

Mr. SPEAKER.—Hon'ble Member is developing a new point. We have just one minute. He can develop it after we reassemble after Tea.

(Mr. Speaker)

I want the Hon'ble Members particularly to know whether Konkani is a upa-bhasha of Marathi, is it to be decided by the Konkanis or Maharashtrians ? I am mentioning the point so that they may think about it. Let the debate be full.

The House will now stand adjourned for half-an-hour.

The House adjourned for Recess at Ten of the Clock and reassembled at Thirty-Five minutes past Ten of the Clock.

[Mr. Speaker in the Chair.]

ಶ್ರೀ ಎ. ಜೆ. ದೊಡ್ಡಮೇಟಿ.—ಸ್ವಾಮಿ, ಇತ್ತೀಚೆಗೆ ನಡೆದ ಗೋವೆಯ ಚುನಾವಣೆ ವಿಷಯದಲ್ಲಿ ಬಹಳ ಆಶಾಭಾವನೆಯನ್ನು ಇಟ್ಟುಕೊಂಡು ಆ ಚುನಾವಣೆಯ ಫಲಿತಾಂಶದಿಂದ ಮಹಾರಾಷ್ಟ್ರದೊಡನೆ ಗೋವ ಸೇರಬೇಕೆಂದು ನಮ್ಮ ಸ್ನೇಹರಾಜ್ಯವಾದ ಮಹಾರಾಷ್ಟ್ರ ಪ್ರತಿಪಾದಿಸುತ್ತದೆ. ಆದರೆ ಆ ಚುನಾವಣೆಯ ಹಿಂದೆ ಒಂದು ದೊಡ್ಡ ಪುರಾಣ ಇದೆ. ಆ ಚುನಾವಣೆಯ ಪರಿಣಾಮ ಹೀಗೆ ಆಗಲಿಕ್ಕೆ ಬಹುಶಃ ನಮ್ಮ ಸ್ನೇಹಿತರಾದ ಮಹಾರಾಷ್ಟ್ರ ಕಾಂಗ್ರೆಸ್ ಮುಖಂಡರು ಅಲ್ಲಿ ಹೋದಾಗ್ಗೆ ತೋರಿದ ಧೋರಣೆಯೇ ಒಂದು ಪ್ರಬಲ ಕಾರಣ ಎನ್ನುವುದನ್ನು ನಾನು ಇಲ್ಲಿ ಹೇಳಲಿಕ್ಕೆ ಅಪೇಕ್ಷೆ ಮಾಡುತ್ತೇನೆ.

Mr. SPEAKER.—No personal allegations mav be made.

ಶ್ರೀ ಎ. ಜೆ. ದೊಡ್ಡಮೇಟಿ.—ವ್ಯಕ್ತಿಗಳ ವಿಷಯವಾಗಿ ಮಾತನಾಡುವುದಿಲ್ಲ, ನನ್ನಷ್ಟು ಮೃದು ಯಾರೂ ಇಲ್ಲ.

ಅಧ್ಯಕ್ಷರು.—ಇದ್ದರೆ ನಾನೊಬ್ಬನೇ.

ಶ್ರೀ ಎ. ಜೆ. ದೊಡ್ಡಮೇಟಿ.—ಒಬ್ಬ ಪ್ರಮುಖರು, ಬಹಳ ಜವಾಬ್ದಾರಿ ಇದ್ದವರು ಗೋವಾ ಚುನಾವಣೆಯಲ್ಲಿ ಕಾಂಗ್ರೆಸ್ ಪತಿಯಿಂದ ಪ್ರಚಾರದ ಸಲುವಾಗಿ ಹೋದಾಗ ಅವರ ಭಾಷಣದಲ್ಲಿ ಹೇಳಿದ್ದು ಹೀಗಿದೆ. "ವಿಲೀನೀಕರಣಕ್ಕೆ ಬದ್ಧರಾಗಿ ಚುನಾವಣೆಯಲ್ಲಿ ಬೇಡುತ್ತಿದೆ ಈ ಗೋಮಾಂತಕ ಮಹಾರಾಷ್ಟ್ರ ಪಕ್ಷ ಆದರೆ ನನ್ನ ಭಾವನೆಯೂ ಸಹ ಅದೇ. ಗೋವೆ ಮಹಾರಾಷ್ಟ್ರದೊಡನೆ ಬಂದೇ ತೀರಬೇಕು. ಈ ಬಗ್ಗೆ ನಮ್ಮ ನಿಮ್ಮ ನಡುವೆ ಭಿನ್ನ". ಇಂಥ ಮಾತುಗಳು ಇಂದು ಅತ್ಯಂತ ಉಚ್ಚ ಸ್ಥಾನದಲ್ಲಿದ್ದವರ ಬಾಯಿಂದ ಬಂದಿವೆ. ಅದರ ಪರಿಣಾಮ ಏನಾಯಿತು ! ಕಾಂಗ್ರೆಸ್ಸಿಗೆ ಮತ ಕೊಡಬೇಕು ಎನ್ನುವವರ ಮೇಲೆ ಎಂದರೆ ಕಾಂಗ್ರೆಸ್ಸಿಗೆ ಮತ ಕೊಟ್ಟರೂ ಅಷ್ಟೇ, ಗೋಮಾಂತಕ ಮಹಾರಾಷ್ಟ್ರ ಪಕ್ಷಕ್ಕೆ ಮತ ಕೊಟ್ಟರೂ ಅಷ್ಟೇ. ಕಾಂಗ್ರೆಸ್ಸಿನ ಮುಖಂಡರೇ ಹೀಗೆ ಹೇಳುವಾಗ ಕಾಂಗ್ರೆಸ್ಸಿಗೆ ಮತ ಕೊಡುವುದರಲ್ಲಿ ಪ್ರಯೋಜನವಿಲ್ಲ, ಅವರಿಗೆ ಮತ ಕೊಟ್ಟರೆ ಮಹಾರಾಷ್ಟ್ರದೊಂದಿಗೆ ಸೇರಿಸುತ್ತಾರೆ ಎನ್ನುವ ಭಾವನೆ ಅಲ್ಲಿಯ ಜನರಿಗೆ ಬಂತು. ಕಾರಣ ಅವರು ಯುನೈಟೆಡ್ ಗೋವನ್ಸ್ ಅಥವಾ ಸ್ವತಂತ್ರರಿಗೆ ಮತವನ್ನು ಕೊಟ್ಟರು. ಈ ರೀತಿ ಮತದಾರರ ಮನಸ್ಸಿನ ಪರಿಣಾಮವಾಯಿತು. ಇದರ ಹೊರತಾಗಿ ಕಾಂಗ್ರೆಸ್ ಸಲುವಾಗಿ ಪ್ರಚಾರಕ್ಕೆ ಗೋವೆಗೆ ಬಂದಂಥ ಮಹಾರಾಷ್ಟ್ರದ ಕಾಂಗ್ರೆಸ್ ಬಂಧುಗಳು ಇಂದು ಗೋವೆಯಲ್ಲಿ ಮುಖ್ಯ ಮಂತ್ರಿಯಾಗಿ ಇರುವವರ ಮನೆಯಲ್ಲಿಯೇ ಉಳಿದುಕೊಂಡು ಕೆಲಸ ಮಾಡಿದರೆಂದೂ ಜನ ಆಡುತ್ತಿದ್ದಾರೆ. ಇದರ ಪರಿಣಾಮ ಜನರ ಮನಸ್ಸಿನ ಮೇಲೆ ಏನಾಗಬಹುದು ಎಂಬುದು ತಮಗೆಲ್ಲ ಗೊತ್ತಿದೆ. ಚುನಾವಣೆಯ ರಂಗದಲ್ಲಿ ಯಾವ ರೀತಿ ಇರಬೇಕು ಎನ್ನುವುದು ಎಲ್ಲರಿಗೂ ಗೊತ್ತಿದೆ. ನಾನೂ ಮತ್ತು ಶ್ರೀ ಕೃಷ್ಣ ಅವರೂ ಎಷ್ಟೇ ಸ್ನೇಹಿತರಾಗಿದ್ದರೂ ಚುನಾವಣೆಯ ಕಾಲಕ್ಕೆ ಯಾವುದೇ ಕಾರಣಕ್ಕೆ ನಾವಿರ್ವರೂ ಒಂದೇ ಕಾರನ್ನು ಹತ್ತಿದರೆ ಜನರು ದಿಗಿಲುಗೊಳ್ಳುತ್ತಾರೆ. ಚುನಾವಣೆಯ ರೀತಿ ಅದು. ಇಂಥ ಅನೇಕ ರೀತಿಯ ಕಾರಣದಿಂದ ಅಲ್ಲಿಯ ಕಾಂಗ್ರೆಸ್ ಸೋಲಲು ಪ್ರಬಲ ಕಾರಣವಾಯಿತು. ಅಲ್ಲದೇ ಗೋವಾ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರು ಮೊನ್ನೆ ಬೆಂಗಳೂರಿನಲ್ಲಿ ಬೀಡು ಬಿಟ್ಟಾಗ ಅತ್ಯಂತ

ಸ್ಪಷ್ಟವಾಗಿ ಹೇಳಿದ್ದಾರೆ.'' ಯಾವ ಕಾರಣಕ್ಕಾಗಿಯೂ ಗೋವೆ ಮಹಾರಾಷ್ಟ್ರದೊಡನೆ ವಿಲೀನವಾಗುವ ಪ್ರಶ್ನೆ ಇಲ್ಲ. ಅದು ಸ್ವತಂತ್ರವಾಗಿ ಉಳಿಯುವುದಕ್ಕೆ ಅವಕಾಶವನ್ನು ಬೇಡುತ್ತೇನೆ. ದಯವಿಟ್ಟು ಹೊರಗಿನ ಯಾವ ರಾಜ್ಯಗಳೂ ನಮ್ಮ ಭಾಗವನ್ನು ಪಡೆಯುವುದಕ್ಕೆ ಪ್ರಯತ್ನ ಮಾಡಬೇಡಿ'' ಎಂದು ಹೇಳಿದರು. ಇನ್ನು ಚುನಾವಣೆ ಲೆಖ್ಖದ ವಿವರ ಹೇಗಿದೆ ಎಂಬುದನ್ನು ನೋಡೋಣ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇದರಲ್ಲಿ ಕೇಂದ್ರ ಸಚಿವರು ಒಬ್ಬರು ಕೈಹಾಕಿದ್ದಾರೆಂದು ಹೇಳುತ್ತಿದ್ದಾರಲ್ಲಾ !

ಶ್ರೀ ಎ. ಜೆ. ದೊಡ್ಡಮೇಟಿ.—ಮಾನ್ಯ ನನ್ನ ಸ್ನೇಹಿತರು ಆ ರೀತಿ ಹೇಳಿದರೂ ಅಷ್ಟೆ, ನಾನು ಹೀಗೆ ಹೇಳಿದರೂ ಅಷ್ಟೆ. ಅದಿರಲಿ ಆದರೆ ಚುನಾವಣೆ ಅಲ್ಲಿ ನಡೆದಾಗ ಯಾವರೀತಿ ಅಂಕಿ ಅಂಶಗಳಿದ್ದುವು ಎಂಬುವನ್ನು ಸ್ವಲ್ಪ ಮಟ್ಟಿಗೆ ಲೆಖ್ಖ ತೆಗೆದುಕೊಂಡು ನೋಡೋಣ. ಚುನಾವಣೆಯಲ್ಲಿ ಒಟ್ಟು ರಿಕಾರ್ಡ್ ಆದದ್ದು 2 ಲಕ್ಷ 49 ಸಾವಿರ ಮತಗಳು. ಅದರಲ್ಲಿ ಆ ರಾಜ್ಯದ ಆಡಳಿತ ಪಕ್ಷಕ್ಕೆ ಮತಗಳು ಸಿಕ್ಕಿದ್ದು 1 ಲಕ್ಷ 9 ಸಾವಿರ. ಅವರು 30 ಸ್ಥಾನಗಳಲ್ಲಿ 14 ಸ್ಥಾನಗಳನ್ನು ಮಾತ್ರ ಪಡೆದಿದ್ದಾರೆ. ಆದರೆ ಮತಗಳ ಲೆಕ್ಕಾಚಾರ ನೋಡಿದರೆ ಹೇಗೆ ಅಷ್ಟು ಮತಗಳನ್ನು ಅವರು ಪಡೆದರು, ಯಾವರೀತಿ ಅಷ್ಟು ಸ್ಥಾನಗಳನ್ನು ಹೊಂದಿದರು ಎಂಬುದನ್ನು ಈಗಾಗಲೇ ಬಹಳ ಸೌಮ್ಯವಾಗಿ ಹೇಳಿದ್ದೇನೆ. ಸುಮಾರು 1 ಲಕ್ಷ 40 ಸಾವಿರ ಜನರು ಆಡಳಿತ ಪಕ್ಷದ ವಿರುದ್ಧ ಅರ್ಥಾತ್ ಮಹಾರಾಷ್ಟ್ರದೊಡನೆ ವಿಲೀನ ವಾಗುವುದಕ್ಕೆ ಅಭಿಪ್ರಾಯ ಪಟ್ಟಿದ್ದಾರೆ. ಈ ಒಂದು ಲಕ್ಷ 9 ಸಾವಿರ ಜನರು ಒಂದು ಲಕ್ಷ 40 ಸಾವಿರ ಜನರ ಅಭಿಪ್ರಾಯವನ್ನು ಬದಲಾಯಿಸಬೇಕೆಂದು ಅಭಿಪ್ರಾಯ ಪಡುವುದು ಯಾವ ಪ್ರಜಾಪ್ರಭುತ್ವ ರಾಜ್ಯದ ಲಕ್ಷಣವೆಂಬುದನ್ನು ನಾವು ವಿಚಾರ ಮಾಡಬೇಕಾಗಿದೆ.

ಇನ್ನು ಮಹಾರಾಷ್ಟ್ರ ವಿಧಾನ ಮಂಡಲಗಳ ನಿರ್ಣಯ ವಿಚಾರದಲ್ಲಿ ಗೋವಾದ ಮುಂಖಂಡರ ಮನಸ್ಸಿನ ಮೇಲೆ ಏನೇನು ಪರಿಣಾಮವಾಗಿದೆ ಎಂಬುದನ್ನು ಮಾನ್ಯ ಸದಸ್ಯರು ಈಗ ನೋಡಬಹುದು. ನಿನ್ನೆ ಹಿಂದೂ ಪತ್ರಿಕೆಯಲ್ಲಿ ಈ ರೀತಿ ಸುದ್ದಿ ಬಂದಿದೆ. ಗೋವಾ ಯುವಕ ಲೀಗಿನವರು ಮಹಾರಾಷ್ಟ್ರಕ್ಕೆ ಒಂದು ತಂತಿಯನ್ನು ಕಳುಹಿಸಿದ್ದಾರೆ. ದಯಮಾಡಿ ಸದಸ್ಯರು ಕೇಳಬೇಕು. ಅದು ಈ ರೀತಿ ಇದೆ :—

Goa is disturbed...........It is our right to decide Goa's future and not yours. We shall not tolerate any interference in Goa's problems by other States. ಮಹಾರಾಷ್ಟ್ರದ ನಿರ್ಣಯ ಈ ರೀತಿ ಇದೆ. ಈ ಪ್ರತಿಕ್ರಿಯೆಯನ್ನು ವಿಚಾರ ಮಾಡಿಯೇ ಇಲ್ಲ. ನಮ್ಮ ನೆರೆಯ ಬಂಧುಗಳು ಇನ್ನು ಐತಿಹಾಸಿಕ ಕಾರಣವೆಂದರೆ ಯಾವ ಇತಿಹಾಸವೂ ಮಹಾರಾಷ್ಟ್ರವನ್ನು ಬೆಂಬಲಿಸುವಂಥ ಘಟನೆಗಳು ಗೋವಾದಲ್ಲಿ ಈ ಮೊದಲು ನಡೆಯಲಿಲ್ಲ. ಮಹಾರಾಷ್ಟ್ರ ಮತ್ತು ಗೋವಾ ನಡುವೆ ಯಾವ ಇತಿಹಾಸ ಸಂಬಂಧವೂ ಇಲ್ಲ. ತದ್ವಿರುದ್ಧವಾಗಿ ಕರ್ನಾಟಕಕ್ಕೆ ಮತ್ತು ಗೋವಾಕ್ಕೆ 2 ಸಾವಿರ ವರ್ಷಗಳ ಸಬಂಧವಿದ್ದ ಇತಿಹಾಸವಿದೆ. ಅದನ್ನು ನಾನು ಹೇಳುತ್ತೇನೆ. ಏನೆಂದರೆ ಐತಿಹಾಸಿಕ ದೃಷ್ಟಿಯಿಂದ ಇದನ್ನು ವಿಚಾರ ಮಾಡುವುದಾದರೆ 1190 ರಿಂದ 1312 ರವರೆಗೆ ಕದಂಬರು, 1312 ರಿಂದ 1370 ರವರೆಗೆ ಮಲ್ಲಿಕಾಫೂರ್, 1370 ರಿಂದ 1498 ರವರೆಗೆ ವಿಜಯನಗರದವರು, 1498 ರಿಂದ 1510 ರವರೆಗೆ ಬಿಜಾಪುರ ಆದಿಲಷಾಹಿಗಳವರು, 1510 ರಿಂದ ಪೋರ್ಚುಗೀಸರು ಅಲ್ಲಿ ರಾಜ್ಯಾಡಳಿತ ಮಾಡಿದರು. ಈ ಮಧ್ಯೆ ನಮ್ಮೆಲ್ಲರಿಗೂ ಪೂಜ್ಯರಾಗಿದ್ದಂಥ ಶ್ರೀ ಶಿವಾಜಿ ಮಹಾರಾಜರು ಒಂದು ಸಾರಿ ಗೋವಾಕ್ಕೆ ಬಂದು ಹೋದರೆಂಬುದು ನಿಜ. ಇಷ್ಟು ಸಂಪರ್ಕ ಇತಿಹಾಸ ಬಿಟ್ಟರೆ ಮತ್ತೆ ಇನ್ನೇನೂ ಇಲ್ಲ. ಇವರು ಅಲ್ಲಿಗೇಕೆ ಬಂದರು ಎಂಬುದು ನನಗೆ ಗೊತ್ತಿಲ್ಲ. ಒಂದು ಸಾರಿ ಅಲ್ಲಿಗೆ ಅವರು ಬಂದು ಹೋದರು ಎಂಬ ಅಂಶವೊಂದನ್ನುಳಿದು ಇನ್ನು ಯಾವ ಇತಿಹಾಸದ ಸಂಬಂಧವೂ ಮಹಾರಾಷ್ಟ್ರದ್ದು ಗೋವಾದೊಡನೆ ಇಲ್ಲ. ಆದರೆ ಗೋವೆ ಮಹಾರಾಷ್ಟ್ರದಲ್ಲಿಯೇ ಉಳಿಯಬೇಕೆಂಬ ಅವರ ಹಟವನ್ನು ನೋಡಿದಲ್ಲಿ ಅದು ಒಂದು ಆಕ್ರಮಣಕಾರೀ ಪ್ರವೃತ್ತಿಯೇ ಹೊರತು ಮತ್ತೆ ಏನೂ ಅಲ್ಲ. ನಿನ್ನೆ ವಿಧಾನ ಪರಿಷತ್ತಿನಲ್ಲಿ ಮಾತನಾಡುತ್ತಾ ನಮ್ಮ ಮುಖ್ಯ ಮಂತ್ರಿಗಳು ಈ ಬಗ್ಗೆ ಇಷ್ಟು ಏಕೆ ಅವಸರ ಅವರು ಮಾಡುವುದು ನನಗೆ ತಿಳಿಯುವುದಿಲ್ಲವೆಂದು ಹೇಳಿದ್ದಾರೆ. ಆ ಅವಸರದ ಬಗ್ಗೆ ನಾನು ತಿಳಿದ ಕೆಲವು ಅಂಶಗಳನ್ನು ಹೀಗೆ ಹೇಳ ಬಯಸುತ್ತೇನೆ. ಈ ರೀತಿಯಾದ ಅವಸರಕ್ಕೆ ಎರಡು ಪ್ರಬಲವಾದ ಕಾರಣಗಳಿವೆ. ದಿವಂಗತ ಪಂಡಿತ ಜವಹರ್‌ಲಾಲ್ ನೆಹರೂ ಅವರ ಅಭಿಪ್ರಾಯಕ್ಕೆ ಅನುಸರಿಸಿ ಗೋವಾದವರು 10 ವರ್ಷ ಸ್ವತಂತ್ರವಾಗಿರಿಸಿದರೆ ನಂತರ ಯಾವ ಕಾರಣದಿಂದಲೂ ಗೋವೆ ತನಗೆ ದೊರಕುವುದಿಲ್ಲವೆಂಬುದು

(ಶ್ರೀ ಎ. ಜೆ. ದೊಡ್ಡಮೇಟಿ)

ಒಂದು ಕಾರಣವಾದರೆ ಇನ್ನೊಂದು ಅತ್ಯಂತ ಪ್ರಬಲವಾದ ಕಾರಣವಿದೆ. ಗೋವಾ ಈಗ ಪಡೆದುಕೊಂಡರೆ ಬೆಳಗಾವಿ ಮತ್ತು ಕಾರವಾರ ಭಾಗಗಳನ್ನು ಕೇಳಲಿಕ್ಕೆ ಹೆಚ್ಚಿನ ಬಲ ಬರುತ್ತದೆ ಎಂಬದು ಎರಡನೆಯ ಕಾರಣ. ಸರ್ಕಾರದವರು ಈ ಎರಡನೆ ಕಾರಣದ ಬಗ್ಗೆ ಹೆಚ್ಚು ಗಮನ ಕೊಟ್ಟು ಮೊದಲು ಗೋವಾ ಭಾಗವನ್ನು ಕಾಯ್ದುಕೊಂಡು ಬೆಳಗಾವಿ ಕಾರವಾರ ಭಾಗಗಳನ್ನು ರಕ್ಷಿಸುವುದಕ್ಕೆ ಪ್ರಯತ್ನ ಪಡಬೇಕು. ಇಲ್ಲದಿದ್ದರೆ ಕರ್ಣಾಟಕಕ್ಕೆ ಬಹಳ ತೊಂದರೆಯಾಗುತ್ತದೆಂಬುದನ್ನು ನಮ್ಮ ಸರ್ಕಾರದವರು ಈಗಲೇ ಗಂಭೀರವಾಗಿ ವಿಚಾರ ಮಾಡುವುದು ಅಗತ್ಯ. ಹೀಗೆ ಗಂಭೀರ ವಿಚಾರ ಮಾಡಿ ನೋಡಿ ಗೋವೆಯ ರಕ್ಷಣೆಯ ಬಗ್ಗೆ ಸರಕಾರ ಸಿದ್ಧವಾಗಿರಬೇಕು. 7 ಲಕ್ಷ ಜನಸಂಖ್ಯೆ 1,312 ಚದುರ ಮೈಲಿಗಳಷ್ಟು ವಿಸ್ತೀರ್ಣ ಇರತಕ್ಕ ಗೋವೆ ಭೂಗೋಲಿಕವಾಗಿ ಕರ್ಣಾಟಕದ ಅವಿಭಾಜ್ಯಭುಜ ಸ್ಥಾನದಲ್ಲಿದ್ದು ನಮ್ಮ ನಾಡಿಗೆ ಭೂಷಣಪ್ರಾಯವಾಗಿರುತ್ತದೆ. ಗೋವೆ ಒಂದು ಮಾರ್ಗದರ್ಶನ ಪಡೆಯುವಂಥ ರಾಜ್ಯವಾಗಿರುತ್ತದೆ. ಏಕೆಂದರೆ ಅಲ್ಲಿ ವಿಶಾಲ ಸಂಸ್ಕೃತಿ ಇದೆ, ಅನೇಕ ಮಹತ್ಸಂಪನ್ಮೂಲಗಳು ಇವೆ. ಈ ದೃಷ್ಟಿಯಿಂದ ವಿಚಾರ ಮಾಡುವಾಗ ಸಹ ಗೋವೆಯನ್ನು ನಾವು ಉಳಿಸಬೇಕು, ಬೆಳೆಸಬೇಕೆ ಹೊರತು ಅದನ್ನು ಈಗಲೇ ಸಮುದ್ರಕ್ಕೆಸೆದು ಸರ್ವನಾಶಕ್ಕೆ ಗುರಿಮಾಡಬಾರದೆಂಬುದೇ, ನಮ್ಮ ಮನೋಭಾವ. ಅದು ವಿಲೀನವಾಗುವುದಾದರೆ ನಮ್ಮ ಕರ್ಣಾಟಕದಲ್ಲಿ ಸೇರ್ಪಡೆ ಯಾದಾಗಲೇ ಅದರ ನಿಜ ಕಲ್ಯಾಣವಿದೆ. ಗೋವಾವನ್ನು ಮಹಾರಾಷ್ಟ್ರದಲ್ಲಿ ಕೂಡಿಸಿದರೆ ಗೋವೆಯ ಆರ್ಥಿಕ ದೃಷ್ಟಿಯಿಂದ, ನಾಶವಾಗುತ್ತದೆ. ಸಾಂಸ್ಕೃತಿಕ ದೃಷ್ಟಿಯಿಂದ ತನ್ನ ಅಸ್ತಿತ್ವ ಕಳೆದುಕೊಳ್ಳುತ್ತದೆ. ಈ ಎಲ್ಲಾ ಮಾತುಗಳನ್ನು ಲಕ್ಷಕ್ಕೆ ತಗೆದುಕೊಂಡರೆ ಗೋವಾ ಮಹಾರಾಷ್ಟ್ರಕ್ಕೆ ಸೇರುವ ಬಗ್ಗೆ ಯಾವ ಸಮರ್ಥನೀಯ ಕಾರಣವೂ ಇರುವುದಿಲ್ಲ. ಈಗಾಗಲೇ ಗೋವಾ ಜನರು ಈ ವಿಚಾರದಲ್ಲಿ ಬಹಳ ಗಾಬರಿಯಾಗಿದ್ದಾರೆ. ಗೋವಾ ಮುಖಂಡರಾದ ಡಾ॥ ಅರೇಲ್ ಮೆಂಡೋಕರು ಈ ವಿಷಯದ ಬಗ್ಗೆ ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಅದನ್ನು ಈ ಸಭೆಯ ಅಧ್ಯಕ್ಷರ ಅಪ್ಪಣೆ ಪಡೆದು ಓದಿ ಹೇಳುತ್ತೇನೆ. ಅದು ಈ ರೀತಿ ಇದೆ :—

ಗೋವಾ ಜನರ ಮನೋಭಾವನೆಯನ್ನು ಕೆಡಿಸಿದಂತೆ ಮಹಾರಾಷ್ಟ್ರದವರು ಈ ಬಗ್ಗೆ ವಿಚಾರ ಮಾಡಬೇಕಾಗಿತ್ತು. ಮಹಾರಾಷ್ಟ್ರದವರಲ್ಲಿ ನಿಶ್ಚಲವಾದ ನ್ಯಾಯ ಬುದ್ಧಿ ಇದ್ದರೆ ಅವರು ಗೋವಾ ಪ್ರಶ್ನೆಯನ್ನು ಈಗ ಎತ್ತಕೂಡದು. ಮಹಾರಾಷ್ಟ್ರದವರ ಕೀರ್ತಿ ಇನ್ನೂ ಬೆಳೆಯಬೇಕು. ಈ ದೃಷ್ಟಿಯಿಂದ ಅವರು ಇದನ್ನು ವಿಚಾರ ಮಾಡಬೇಕು. ಮಹಾರಾಷ್ಟ್ರದವರು ನನ್ನ ಮಿತ್ರರಿದ್ದಾರೆ. ಮಹಾರಾಷ್ಟ್ರಕ್ಕೆ ನನ್ನ ಮಗಳನ್ನು ಕೊಟ್ಟಿದ್ದೇನೆ. ಅಲ್ಲಿ ನನ್ನ ಸಂಬಂಧವಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ವಾಮಿ ಹೆಣ್ಣು ಕೊಟ್ಟು ತಂದರೆ ರಾಜ್ಯವನ್ನು ಬದಲಾಯಿಸುತ್ತಾರೆಯೇ !

ಶ್ರೀ ಎ. ಜೆ. ದೊಡ್ಡಮೇಟಿ.—ಮಹಾರಾಷ್ಟ್ರ ಮಾನಸಿಕವಾಗಿ ಇನ್ನೂ ಎತ್ತರವಾಗಿ ಬೆಳೆಯಬೇಕು. ಅದು ಇನ್ನೂ ಉನ್ನತವಾಗಿ ವಿಚಾರಿಸಬೇಕು. ಮಹಾರಾಷ್ಟ್ರದವರು ತಮ್ಮ ಘನತೆತ್ತ ಹೆಸರನ್ನು ಸಾರ್ಥಕಮಾಡಿಕೊಳ್ಳಬೇಕು. ಆರೀತಿ ಆಗಬೇಕಾದರೆ ಅವರು ಒಂದು ವಿಶಾಲ ಮನಸ್ಸು ಮಾಡಬೇಕು. ಇಲ್ಲದೇ ಹೋದರೆ ನಿಶ್ಚಯವಾಗಿ ಮಹಾರಾಷ್ಟ್ರದವರು ಅವರ ಹೆಸರಿನ ಸಾರ್ಥಕತೆಯನ್ನು ಪಡೆಯುವುದಿಲ್ಲವೆಂದು ನಾನು ಹೇಳುತ್ತೇನೆ. ಈ ದೃಷ್ಟಿಯಿಂದ ಅವರು ವಿಚಾರ ಮಾಡಿದಾಗ್ಗೆ ನಾವು ಅದನ್ನು ಅನುಕರಣೆ ಮಾಡುತ್ತೇವೆ ಇನ್ನು ನಮ್ಮ ವಾದ ಸಮರ್ಥನೆಯನ್ನು ನಾನು ಸಿದ್ಧಪಡಿಸುವಲ್ಲಿ, ಐತಿಹಾಸಿಕ ದೃಷ್ಟಿಯಿಂದ ಯಾವ ಯಾವ ರೀತಿಯಿಂದ ಗೋವಾ ಕರ್ನಾಟಕಕ್ಕೆ ಸಂಬಂಧ ಇದೆ ಎನ್ನುವುದನ್ನು ನಾನು ಹೇಳಿದ್ದೇನೆ. ಭೌಗೋಳಿಕವಾಗಿ ನಕ್ಷೆಯಲ್ಲಿ ತೋರಿಸಿರುವ ರೀತಿಯಲ್ಲಿ ಗೋವಾ 100 ಕ್ಕೆ 80 ಭಾಗ ಕರ್ನಾಟಕಕ್ಕೆ ಹೊಂದಿಕೊಂಡಿದೆ. 20 ಭಾಗ ಮಾತ್ರ ಮಹಾರಾಷ್ಟ್ರಕ್ಕೆ ಹೊಂದಿಕೊಂಡಿದೆ ಆರ್ಥಿಕ ದೃಷ್ಟಿಯಿಂದ ಕೂಡಾ ಗೋವಾ ಕರ್ನಾಟಕದೊಡನೆ ವ್ಯಾಪಾರೋದ್ಯಮವನ್ನು ಎಂದಿನಿಂದಲೂ ಬೆಳೆಸಿಕೊಂಡಿದೆ. ಗೋವಾದಲ್ಲಿ ಕನ್ನಡ ಲಿಪಿಗಳಿವೆ. ನನ್ನ ಮಿತ್ರರು ಅಲ್ಲಿ ಯಾವ ಯಾವ ಶಾಲೆಗಳು ಎಷ್ಟೆಷ್ಟು ಇವೆ ಎಂದು ಕೇಳಿದರು. ಆದರ ಸಂಖ್ಯೆಯನ್ನು ಬೇಕಾದರೆ ಹೇಳುತ್ತೇನೆ. ಇತ್ತೀಚೆಗೆ ಹೊಸ ಸರ್ಕಾರ ಬಂದ ಮೇಲೆ ಬದಲಾವಣೆಯಾಗಿದೆಯೋ ಏನೋ ನನಗೆ ಗೊತ್ತಿಲ್ಲ. ಸ್ವಾಭಾವಿಕವಾಗಿ ಅವರು ತಮಗೆ ಅನುಕೂಲವಾಗುವಂತೆ ಮಾಡಿಕೊಂಡಿರಬಹುದು. ತತ್ಪೂರ್ವದಲ್ಲಿ 1959 ನೆಯ ಇಸವಿಯ ಅಂಕಿ ಸಂಖ್ಯೆಗಳ ಪ್ರಕಾರ ಪೋರ್ಚುಗೀಸ್ ಭಾಷೆಯನ್ನು ಕಲಿಯತಕ್ಕ ವಿದ್ಯಾರ್ಥಿಗಳ ಸಂಖ್ಯೆ 19,253 ; ಇಂಗ್ಲೀಷ್ ಕಲಿಯತಕ್ಕ ವಿದ್ಯಾರ್ಥಿಗಳ ಸಂಖ್ಯೆ 12,865 ಮರಾಠಿಯನ್ನು ಕಲಿಯತಕ್ಕ ವಿದ್ಯಾರ್ಥಿಗಳ ಸಂಖ್ಯೆ 1[illegible],314. ಕನ್ನಡವನ್ನು ಕಲಿಯತಕ್ಕವರ ಸಂಖ್ಯೆ

ಯನ್ನು ಈಗ ನಾವು ತೆಗೆದುಕೊಂಡು ಬರಬೇಕಾಗಿದೆ. ಇಲ್ಲಿ ನಾನು ಭಾಷಾ ದೃಷ್ಟಿಯಿಂದ ಮಾತ ನಾಡುವುದಿಲ್ಲ.

(Interruptions.)

Mr. SPEAKER.—I am giving the last warning to members. Are we having a serious debate or not? There are interjections not only from one side but from all sides?

Sri V. S. PATIL.—The Hon'ble Member Sri Dodlameti gave figures and so we asked him what is the number of Marathi schools.

Mr. SPEAKER.—Hon'ble Members must remember that when it is a question of statistics, it is always difficult. If Members go on interjecting.........

Sri V. S. PATIL.—We are not interjecting; we are only asking him to give the figures of Marathi schools if he has got.

Mr. SPEAKER.—How many interjections? I request Hon'ble Members not to disturb him; let him have his own way. I suppose we are closing the debate and putting it to the vote.

Sri S. NIJALINGAPPA (Chief Minister).—It must be closed today.

Mr. SPEAKER.—Unless Members come to some sort of arrangement, how can we close it today?

Sri S. NIJALINGAPPA.—May I suggest that we may sit in the afternoon?

Mr. SPEAKER.—Why did not Members apply their minds till now?

Sri C. J. MUCKANNAPPA.—We should be permitted to offer our remarks on this motion.

Sri V. S. PATIL.—Let us sit tomorrow.

Mr. SPEAKER.—In the meantime, I will invite some members to my Chamber to discuss this matter.

[MR. VICE CHAIRMAN. (Sri P. F. D'Mellow) in the Chair.]

ಶ್ರೀ ಎ. ಜೆ ದೊಡ್ಡಮೇಟಿ.—ನಮ್ಮ ಮಹಾರಾಷ್ಟ್ರ ಸ್ನೇಹಿತರು ವಾದಿಸಿದಂತೆ ಇಂದೇ ನಾವು ಗೋವೆಯನ್ನು ಕರ್ನಾಟಕದೊಳಗೆ ವಿಲೀನವಾಗಬೇಕು ಎಂದು ನಾವು ಕೇಳುವುದಿಲ್ಲ; ನಮ್ಮ ನಿರ್ಣಯ ಸ್ಪಷ್ಟವಾಗಿದೆ. ಇನ್ನು 10 ವರ್ಷಗಳವರೆಗೆ ಗೋವಾ ತಾನೇ ತಾನಾಗಿ ಬೆಳೆಯಬೇಕು, ಅದು ತನ್ನ ಅಭಿವೃದ್ಧಿಯನ್ನು ಹೊಂದಬೇಕು, ಅಭಿವೃದ್ಧಿಯನ್ನು ಹೊಂದಿದ ನಂತರ ಅದು ಮಹಾರಾಷ್ಟ್ರಕ್ಕೆ ಸೇರ ಬೇಕೋ ಕರ್ನಾಟಕಕ್ಕೆ ಸೇರಬೇಕೋ ಅಥವಾ ಅದು ಸ್ವತಂತ್ರವಾಗಿ ಉಳಿಯಬೇಕೋ ಎಂಬ ಮೂರು ಪ್ರಶ್ನೆಗಳಲ್ಲಿ ಅವರು ತಮಗೆ ತೋರಿದ್ದನ್ನು ಆರಿಸಿಕೊಳ್ಳಬೇಕು. ಇದು ಬಲಾತ್ಕಾರದ ಪ್ರಶ್ನೆ ಯಲ್ಲ ಬಲಾತ್ಕಾರವನ್ನು ನಾವು ಮಾಡುವುದಿಲ್ಲ. ಬಲಾತ್ಕಾರ ತತ್ವವನ್ನು ನಾವು ಸಂಪೂರ್ಣವಾಗಿ ವಿರೋಧಿಸುತ್ತೇವೆ. ಇಂದು ಅವರನ್ನು ಯಾರು ಬಲಾತ್ಕಾರ ಮಾಡುತ್ತಾರೆ ಎನ್ನುವುದನ್ನು ಸೂಜ್ಞರೇ ನೋಡಿಕೊಳ್ಳಬೇಕು. ಐತಿಹಾಸಿಕವಾಗಿ ಹೇಳುವದಾದಲ್ಲಿ ಇನ್ನೊಂದು ದಾಖಲೆ ಇದೆ. ಕೇಂದ್ರ ಸರ್ಕಾರದವರು ಸ್ಟೋರಿ ಆಫ್ ಗೋವಾ, ಎನ್ನುವ ಒಂದು ಪುಸ್ತಕವನ್ನು ಪ್ರಸಿದ್ಧ ಮಾಡಿದ್ದಾರೆ. ಅದರಲ್ಲಿ ಗೋವಾಚರಿತ್ರೆಯನ್ನು ಬರೆದಿದ್ದಾರೆ. ಅದರಲ್ಲಿ ಒಂದು ಮಾತು ಇದೆ. ಅದು ಈ ರೀತಿ ಇದೆ.

The earlier race of Goa was a clan of Dravidian race called Kannadigas.

ಎಂದು. ಇಂಥಾ ಅನೇಕ ಉದಾಹರಣೆಗಳನ್ನು ಇನ್ನು ಕೊಡಬಹುದು. ಆದರೆ ಆ ಬಗ್ಗೆ ನಮ್ಮ ವರು ಸರಿಯಾಗಿ ಶೋಧಿಸಿಲ್ಲ ಹಾಗೂ ಒಳ್ಳೆಯ ಪ್ರಚಾರವಾಡಿಲ್ಲ. ಇದು ಪ್ರಚಾರಯುಗ. ಈ ಪ್ರಚಾರ ಯುಗವನ್ನು ಅನುಸರಿಸಿ ನಾವು ನಡೆಯುತ್ತಿಲ್ಲ. ಈ ಆಲಸ್ಯ, ಒಳ್ಳೆಯದೋ ಕೆಟ್ಟದ್ದೋ ಅದನ್ನು

(ಶ್ರೀ ಎ. ಜೆ. ದೊಡ್ಡಮೇಟಿ)

ಸರ್ಕಾರ ನಿರ್ಣಯ ಮಾಡಬೇಕು. ಅಂದೇ ನಮ್ಮ ಬೇಡಿಕೆ ಹಿಂದಿನ ಬೆಂಚಿನಲ್ಲಿ ಕುಳಿತುಕೊಂಡಿದೆ. ಇದು ಸ್ವಾಭಾವಿಕ. ಅನೇಕ ವೇಳೆ ಬಹಳ ಬೊಬ್ಬಾಟ ಮಾಡುವವರು ಗದ್ದಲಮಾಡುವವರು ಮುಂದೆ ಬರುತ್ತಾರೆ, ದೊಡ್ಡವರಾಗುತ್ತಾರೆ, ಲಾಭವನ್ನು ಹೊಂದುತ್ತಾರೆ. ಸತ್ಯವಂತರು ನೀತಿವಂತರು ಹಿಂದೆ ಉಳಿಯುತ್ತಾರೆ. 'ಸತ್ಯಮೇವ ಜಯತೇ' ಎನ್ನುವ ಹಾಗೆ ಕೊನೆಗೆ ಸತ್ಯಕ್ಕೆ ಜಯದೊರೆಯುತ್ತಿದೆ. ಗೋವಾ ಜನತೆಯ ಅಭಿವೃದ್ಧಿಯಾಗಬೇಕೆಂಬುದೇ ನಮ್ಮ ನಿರ್ಣಯದ ಗರ್ಭಿತ ಅರ್ಥ ಇಷ್ಟೆ. ಗೋವಾ ಜನರ ಮನೋ ಅಭೀಷ್ಟಕ್ಕೆ ಮನ್ನಣೆ ಕೊಡಲೇಬೇಕು. ಈ ಹಿನ್ನೆಲೆಯಲ್ಲಿ ವಿಷಯಗಳನ್ನು ನಾವು ಇಲ್ಲಿ ಇಚಾರ ಮಾಡಬೇಕಾಗಿದೆ.

11-00 A.M.

ಇದುವರೆಗೂ ನಾನು ಗೋವೆ ವಿಸ್ತೀರ್ಣ ಮತ್ತು ಜನಸಂಖ್ಯೆ ವಿಚಾರ ಹೇಳಿದೆ, ಆ ಜನ ಸಂಖ್ಯೆಯಲ್ಲಿ ಕೊಂಕಣಿಯವರು ಎಷ್ಟು, ಮರಾಠಿಗರು ಎಷ್ಟು ಎನ್ನುವುದನ್ನೂ ಸಹ ಹೇಳಿದೆ. ಇನ್ನು ಅದರ ಭೌಗೋಳಿಕ ಸಂಬಂಧವನ್ನೂ ತೋರಿಸಿದೆ, ಆರ್ಥಿಕ ಸಂಬಂಧವನ್ನು ವಿವರಿಸಿದೆ—ಎಲ್ಲ ರೀತಿಯಿಂದಲೂ ಅದು ಕರ್ನಾಟಕಕ್ಕೇ ಹೆಚ್ಚು ಸಂಬಂಧವಿದೆ. ಅದು ಎಲ್ಲಿ ವಿಲೀನವಾಗಬೇಕು ಎನ್ನುವ ಪ್ರಶ್ನೆಯನ್ನು ನ್ಯಾಯ ಬುದ್ಧಿಯಿಂದ, ಸತ್ಯ ಮಾತಿನಿಂದ ವಿಚಾರ ಮಾಡಿದರೆ ಅದು ಕರ್ನಾಟಕದೊಳಗೇ ವಿಲೀನವಾಗುವುದು ಯೋಗ್ಯವೆಂದು ಯಾವ ನಿಷ್ಪಕ್ಷೀಯನ್ನೇ ಆಗಲಿ ನಿರ್ಣಯ ಕೊಡಬಹುದು. ಇಷ್ಟು ಯೋಗ್ಯವಾದ ಸಂಬಂಧ ಪ್ರಬಲ ಕಾರಣಗಳಿದ್ದರೂ ಅದು ಕರ್ನಾಟಕದೊಳಗೆ ಈಗಲೇ ಸೇರಬೇಕೆಂದು ನಾವು ಒತ್ತಾಯ ಪಡಿಸುವುದಿಲ್ಲ. ಏಕೆಂದರೆ ನಾವು ನಮ್ಮ ರಾಜ್ಯವನ್ನು ವಿಸ್ತಾರ ಮಾಡುವುದಕ್ಕೆ ಅಪೇಕ್ಷೆ ಪಡುವುದಿಲ್ಲ. ಯಾವ ರಾಜ್ಯವನ್ನು ನಾವು ತೆಗೆದುಕೊಳ್ಳಬೇಕಾದರೂ ಆ ರಾಜ್ಯಾಭಿಪ್ರಾಯ ಬಹಳ ಮುಖ್ಯ. ಹಾಗೆ ಗೋವಾ-ರಾಜ್ಯ ಬೆಳೆಯಲಿ, ದೊಡ್ಡದಾಗಲಿ ತನ್ನದ್ದೇ ಕರ್ನಾಟಕದವರು ಮಹಾರಾಷ್ಟ್ರದೊಡನೆ ಸಂಪರ್ಕವಿಟ್ಟುಕೊಳ್ಳಲಿ, ಮಹಾರಾಷ್ಟ್ರದವರು ಕರ್ನಾಟಕದವರೊಡನೆ ಸಂಪರ್ಕವನ್ನಿಟ್ಟುಕೊಳ್ಳಲಿ ಸದ್ಭಾವನೆ ಬೆಳೆಯಲಿ ನಾವು ಸದ್ಯಕ್ಕೆ ಗೋವೆಯ ತಂಟೆಗೆ ಇಳಿಯುವದು ಬೇಡ. ಪಾಪ ನಿನ್ನೆ ಮೊನ್ನೆ ಮುಕ್ತವಾದ ಎಳೆಯ ಗೋವೆಯ ಬಗ್ಗೆ ಬಲಾತ್ಕಾರ ಮಾಡಿದಲ್ಲಿ ಕೈ ಹಿಡಿದು ಎಳೆದಾಡಿದಲ್ಲಿ ಅದು ಪೋಲೀಸ್ ಇಲಾಖೆಗೆ ಒಪ್ಪಿಸುವ ಪ್ರಕರಣವಾಗುತ್ತದೆ. ಅರ್ಥಾತ್ ಬಲಾತ್ಕಾರದ ಮದುವೆ ಬೇಡವೆಂದು ನಾನು ಈಗ ಹೇಳುತ್ತೇನೆ. ಇದೀಗ ಮಹಾರಾಷ್ಟ್ರ ಸರ್ಕಾರದ ನೀತಿ ಈ ರೀತಿಯದಾಗಿದೆ. ಇದನ್ನು ಪವಿತ್ರ ಪ್ರಜಾಪ್ರಭುತ್ವ ಒಪ್ಪುವುದೇ ಎಂದು ನಾನು ಪ್ರಶ್ನೆ ಮಾಡುತ್ತೇನೆ. ಇದನ್ನು ವಿಚಾರ ಮಾಡಬೇಕಾದುದು ಕೇಂದ್ರ ಸರ್ಕಾರ. ಕೇಂದ್ರ ಸರ್ಕಾರ ಇಂತಹ ಬಲತ್ಕಾರಕ್ಕೆ ಬಾಗಿ ಪುನರಾಲೋಚನೆ ಮಾಡಬೇಕೆಂದು ನಿರ್ಣಯಕ್ಕೆ ಬಂದಿರುವುದರ ಕಾರಣ ನಮಗೇನೂ ತಿಳಿಯಲಾರದಂಥ ವಿಷಯವಾಗಿದೆ. ಬಹಳ ದೊಡ್ಡ ಸ್ಥಾನದಲ್ಲಿ ಮಹಾರಾಷ್ಟ್ರದ ಪ್ರಮುಖರು ಇರುವದು ಕಾರಣವೋ, ಅಥವಾ ದೊಡ್ಡ ಸಂಖ್ಯೆಯಲ್ಲಿ ಅವರು ಪಾರ್ಲಿಮೆಂಟರಿ ಸದಸ್ಯರಾಗಿರುವುದು ಕಾರಣವೋ ಅಥವಾ ಅಷ್ಟೇ ಪ್ರಬಲವಾದ ವ್ಯಕ್ತಿಗಳು ಸದಸ್ಯರು ನಮಗೆ ಅಲ್ಲಿ ಇಲ್ಲವೇ ಇರುವುದು ಕಾರಣವೋ-ಇವೆಲ್ಲವನ್ನೂ ನಾವು ವಿಚಾರ ಮಾಡಬೇಕು. ಉಪಾಯ ಹುಡುಕಬೇಕು—ಅದಿಲ್ಲದೇ, ಸುಮ್ಮನೇ ಇಂಥ ನಿರ್ಣಯಗಳನ್ನು ಸ್ವೀಕರಿಸುವುದರಿಂದ ಏನೂ ಸಾಧನೆಯಾಗಲಾರದು. ಈ ಸಭೆಯಲ್ಲಿ ಸ್ವೀಕರಿಸಬಹುದಾದ ಈ ನಿರ್ಣಯದ ಪ್ರಕಾರ ಗೋವಾವನ್ನು ಕಾಪಾಡುವುದು ಈ ಸರ್ಕಾರದ ಜವಾಬ್ದಾರಿ ಇದೆ. ಆದರೆ ಮಹಾರಾಷ್ಟ್ರದವರ ಹಟಮಾರಿತನಕ್ಕೆ, ಆಕ್ರಮಣಶೀಲ ಪ್ರವೃತ್ತಿಗೆ ಕೇಂದ್ರ ಸರ್ಕಾರದವರೇನಾದರೂ ಮಣಿದರೆ ಇಲ್ಲಿಯ ರಾಜ್ಯಭಾರ ಮಾಡುವುದು ಬಹಳ ಕಷ್ಟವಾಗುತ್ತದೆ. ಈ ವಿಚಾರವನ್ನು ಕೇಂದ್ರ ಸರ್ಕಾರದವರಿಗೆ ರಾಜ್ಯ ಸರ್ಕಾರದವರು ತಿಳಿಸಬೇಕು. ಇಂಥ ಕಾಲದಲ್ಲಿ ಸೌಮ್ಯವಾದರೆ ಅನೇಕ ರೀತಿಯ ಬಲಾತ್ಕಾರ ಪ್ರವೃತ್ತಿಗಳೂ ಸಹ ಮುಂದೆಯೆ ನಡೆಯುತ್ತವೆ. ಎಂಬುದನ್ನು ನಾವೆಲ್ಲ ಗಮನಿಸಬೇಕು. ಕೇಂದ್ರ ಸರ್ಕಾರದವರು ಈ ವಿಷಯದಲ್ಲಿ ಖಂಡಿತವಾಗಿ ಮಹಾರಾಷ್ಟ್ರದತ್ತ ಮನಸ್ಸನ್ನು ಕೊಡಬಾರದೆಂಬುದಾಗಿ ನಾನು ಪುನಃ ಹೇಳಬಯಸುತ್ತೇನೆ. ಪಂಡಿತ ಜವಹರ್‌ಲಾಲ್ ನೆಹರು ಅವರ ವಾರಸುದಾರರೆಂದು ಹೇಳಿಕೊಳ್ಳುವ ಕೇಂದ್ರ ಸರ್ಕಾರದವರು ಈಗ ತಮಗೆ ಯಜಮಾನರ ಹಾಗೆ ಇದ್ದಂತೆ ಶ್ರೀ ನೆಹರೂ ಅವರ ಮಾತಿಗೆ ಈಗ ವಿರೋಧವಾಗಿ ಹೋಗುತ್ತಿರುವುದು ಬಹಳ ಶೋಚನೀಯವಾಗಿದೆ. ಶ್ರೀ ನೆಹರೂ ಅವರ ಸ್ಮಶಾನ ಯಾತ್ರೆ ಮುಗಿದ ಕೆಲವೇ ಕಾಲದಲ್ಲಿಯೇ ಅವರ ಧೋರಣೆಯ ವಿರುದ್ಧ ವರ್ತನೆಯನ್ನು ಕೇಂದ್ರದವರು ತೋರಿಸುತ್ತಿರುವುದಾದಲ್ಲಿ, ಅವರ ಅಭಿಪ್ರಾಯಕ್ಕೆ ವಿರೋಧವನ್ನು ವ್ಯಕ್ತಪಡಿಸುವುದಾದಲ್ಲಿ ಕೇಂದ್ರದವರು ಶ್ರೀ ನೆಹರೂ ಅವರ ವಾರಸುದಾರರು ಹೇಗೆ ಆಗುತ್ತಾರೆಂದು ನಾನು ಇಲ್ಲಿ ಪ್ರಶ್ನೆ ಮಾಡಬಯಸುತ್ತೇನೆ. 10 ವರ್ಷಗಳವರೆಗೆ

ಗೋವೆಯು ಸಮಾಚಾರಕ್ಕೆ ಹೋಗುವುದು ಮಹಾರಾಷ್ಟ್ರದವರಿಗೂ ಬೇಡ ಕರ್ಣಾಟಕದವರಿಗೂ ಬೇಡ, ಗೋವಾದವರೇ ಒಂದು ಅಭಿಪ್ರಾಯವನ್ನು ಹೊಂದಲಿ ಹಾಗೂ ರೂಪಿಸಿಕೊಳ್ಳಲಿ! ಅಭಿಪ್ರಾಯವನ್ನೇ ನಾವು ಎಲ್ಲರೂ ಒಪ್ಪಬೇಕು. ಎಂಬುದೇ ಈ ತೀರ್ಮಾನವಾಗಿದೆ. ನನ್ನ ಅನೇಕ ಸ್ನೇಹಿತರುಗಳು ಇನ್ನೂ ಅನೇಕ ವಿಚಾರಗಳನ್ನು ಹೇಳುವವರಿದ್ದಾರೆ. ಕೊನೆಯದಾಗಿ ನಾನು ಹೇಳುವುದೇನೆಂದರೆ ಸರ್ಕಾರದವರ ಅಭಿಪ್ರಾಯ ಈ ನಿರ್ಣಯದ ಬಗ್ಗೆ ಬೇಗನೇ ಇತ್ಯರ್ಥಕ್ಕೆ ಬರುವುದು ಒಳ್ಳೆಯದು ಹೆಚ್ಚು ವೇಳೆ ಕಳೆದು ಈ ವಿಚಾರವನ್ನು ಚರ್ಚೆ ಮಾಡುವುದು ಅನಾವಶ್ಯಕ, ಶ್ರೀಮಾನ್ ಗಾಂಜೀ ವೀರಪ್ಪನವರು ತಮ್ಮ ನಿರ್ಣಯವನ್ನು ಮಂಡಿಸಬಹುದಾಗಿತ್ತು. ಇವತ್ತಿನ ದಿವಸ ಇಂತಹ ಬದಲಾವಣೆಗಳಾಗುತ್ತಿರುವ ಪರಿಸ್ಥಿತಿಗನುಗುಣವಾಗಿ ಈ ನಿರ್ಣಯವನ್ನು ಇಲ್ಲಿ ಚರ್ಚೆಗೆ ತೆಗೆದುಕೊಂಡದ್ದಾಗಿದೆ. ಗೋವೆ ಕರ್ಣಾಟಕದೊಡನೆ ವಿಲೀನವಾಗುವುದರಿಂದ ಬಹಳ ಒಳ್ಳೆಯದಾಗುತ್ತದೆಂದು ನಾನು ಹಿಂದೆ ಹೇಳಿದ್ದೇನೆ. ಮಾತುಗಳನ್ನು ಇನ್ನು ಹೆಚ್ಚು ಹೇಳೋಣವೆಂದರೆ ಅಷ್ಟು ವೇಳೆ ಇಲ್ಲ. ನಾನು ಈ ವಿಚಾರವನ್ನು 8 ದಿನಗಳವರೆಗೂ ಸರಿಯಾದ ಅಂಕಿ ಸಂಖ್ಯೆಗಳಿಂದ ವಾದಿಸಬಹುದಾಗಿತ್ತು. ಆದರೆ ಅದಕ್ಕೂ ಇದು ಸ್ಥಳವಲ್ಲ ಇತಿಹಾಸ, ಭೌಗೋಳಿಕ ಆರ್ಥಿಕ ಆಧಾರಗಳ ಮೇಲೆ ವಿಚಾರ ಮಾಡಿದ್ದೇ ಆದರೆ ಖಂಡಿತವಾಗಿ ಗೋವಾ ಮುಂದೆ ಕರ್ಣಾಟಕದೊಳಗೇ ಕೂಡಬೇಕಾಗಿದೆ ಪ್ರಬಲವಾದ ಈ ಕಾರಣಗಳಿರುವುದರಿಂದ ಅದು ಕರ್ಣಾಟಕದೊಳಗೇ ಸೂಕ್ತ ಕಾಲದಲ್ಲಿ ವಿಲೀನವಾಗಬೇಕು. ಒಟ್ಟಿನಲ್ಲಿ ಈ ನಿರ್ಣಯವನ್ನು ಹಾಗೂ ಪರಿಸ್ಥಿತಿಯನ್ನು ಕೇಂದ್ರ ಸರ್ಕಾರದವರು ಪರಿಶೀಲಿಸಿದ ನಂತರವೂ ಗೋವಾ ಮಹಾರಾಷ್ಟ್ರಕ್ಕೆ ಸೇರಬೇಕೆಂದು ತೀರ್ಮಾನ ಮಾಡಿದರೆ ಅದುರ್ದೈವ ಘಟನೆಯನ್ನು ಕರ್ಣಾಟಕವು ಗಂಭೀರವಾಗಿ ವಿಚಾರ ಮಾಡಬೇಕಾಗುತ್ತದೆ.

ಇಷ್ಟು ಹೇಳಿ ನನಗೆ ಈ ನಿರ್ಣಯದ ಮೇಲೆ ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Sri B. R. SUNTHANKAR.—I beg to move the following amendments :

(i) That in line 1 omit the words "with deep concern."
(ii) That in lines 4 and 5 omit the words "This Resolution amounts to a negation of."
(iii) That in line 5 the letter 't' in the word 'the' before the word 'policy' shall be written as 'T' and in line 6, the word 'is' shall be inserted between the words 'Nehru' and 'that'.
(iv) That in lines 7 to 10 omit the words "Every consideration .... with Maharashtra".
(v) That in line 10 omit the word 'nevertheless'.

Mr. CHAIRMAN.—Amendment moved :

(i) That in line 1 omit the words "with deep concern."
(ii) That in lines 4 and 5 omit the words "This Resolution amounts to a negation of."
(iii) That in line 5 the letter 't' in the word 'the' before the word 'policy' shall be written as 'T' and in line 6, the word 'is' shall be inserted between the words 'Nehru' and 'that'.
(iv) That in lines 7 to 10 omit the words "Every consideration .... with Maharashtra".
(v) That in line 10 omit the word "nevertheless".

† **Sri GANJI VEERAPPA** (Harihar).—Sir, I consider it a great privilege to give my wholehearted support to this historical rosolution moved by my friend Sri Andanappa Doddameti. We know today that the Goa question looms large in the politics of our country. As my friend Sri Doddameti has ably explained the spirit behind the resolution and the attitude of the Mysore Government to this problem, suffice it for

(SRI GANJI VEERAPPA)

me to say that looked at from any aspect, the case of Mysore is best and irrefutable. In spite of the fact we have hundred per cent case, Mysore has taken an attitude not to force Goa to come to us. It is an *ex-parte* decree that anybody could give. Supposing on a registered hypothecation if a person approaches a court, it will not give a decree unless it hears the other side. The attitude of my friends is, they say they have a case and so give a decision. It is the Parliament that will have to take a decision; the Constitution has to be amended. In spite of the fact that we have the best case, we want Goa to develop into a full stature. It is just like a minor girl who cannot give consent for marriage. After all it was liberated in 1961 and hardly four years have elapsed. We cannot force her to come either to Maharashtra or Mysore. It is true we have a case but still we say let them decide their future. If it decides to merge, it should merge with Mysore. That is the logic behind our stand. The country has to appreciate our stand. It is a noble gesture that Mysore has taken. As against this, what is the case for Maharashtra? We have just heard Sri A. J. Doddameti telling who the original settlers were. They were the Dravidians. You must have seen a publication of the Government of India and Smt. Vijayalakshmi Pandit has written a foreword to it. We can see in the book written in 17th century by Dr. Frailer wherein he says that most of the people are Kanarese speaking. We have not invented facts. These are the facts. The original settlers were Kannadigas and due to historical reasons they had to leave the territory and settle in Karwar and other places. Maharashtra people were nowhere near Goa. According to historical facts for thousands of years it is the Kadamba rulers who ruled the place. The Mothertongue in Goa is Konkani and most of the borders of Goa are surrounded by Mysore; trade relations are with Mysore; export and import are with Mysore and the hinterland is Mysore. After all Goa is not selfsufficient in food. It is a poorly devloped area. In fact only 17 per cent of the land is under cultivation and only 4·5 per cent comes under Irrigation. They entirely depend upon the neighbouring areas. It is Mysore that supplies food to Goa. What claim Maharashrians have for Goa? Even after Goa was liberated what is the attitude of Mysore when compared with Maharashtra? We have given them power. Recently there was opening ceremony of power supply. In spite of that we are not claiming Goa and that the question should be decided immediately. I am only just giving comparative study of the whole thing.

In this connection it is necessary for me to explain to this House some of the assurances held over to Goans and the constitutional position of Goa. In fact even prior to Goa obtaing independent status, in the year 1948 the All-India Congress Committee met at Jaipur and passed a resolution. They stated "the chequered course of Indian Histroy during the last two hundred years has seen foreign possessions...... .....due for long period because India itself was under domination." After that, by

Constitution 12th Amendment Act in 1962, the Goan territory has been integrated with the Indian Union. Thereafter the Indian Territories Act has been passed in 1963 wherein both the Houses met and passed a resolution. Later on after these constitutional changes, Pandit Jawharlal Nehru has given in assurance that Goa should remain independent for 10 years and then only it is for them to decide their future. Later on in the Rajya Sabha, after Pandit Jawharlal Nehru, our own Mysore representative Sri Sriramareddy had asked some questions for which the Minister for Home Sri Hathi has reiterated the stand taken by Sri Nehru and said that this question could be settled later and they could decide later on. These are some of the solemn declarations made on the floor of the Parliament. All these things have taken place and then again even in the election manifesto of the Congress Party in Goa, a categorical assurance was given. Faced with all these commitments and assurances and sacred pronouncements, all on a sudden, simply because by one majority vote a resolution has been passed in Goa, can we implement it ? Can it give them any right to ask for merger of Goa ? We are in a democratic set up and we understand the implications of democracy. They cannot say by a mere vote, that too only 14 representatives from the Gomantak party and with the addition of two Bombay socialists, they have formed the Government, that they should merge with Maharashtra. Such an unstable Government cannot even say that they have passed a resolution to merge Goa.

[Mr. Speaker in the Chair.]

Immediately after the resolution was passed, we have been hearing that mass meetings are held every day; we hear alarming news in papers. I want to ask the Maharashtrians whether they want revolution in Goa to take place. Is this the time to tackle these problems ? Are we having national interest ? Our country is facing a great crisis both internally and externally. Food shortage, economic development and foreign enemies are all there. When these things are there national interest requires that we should think of bigger problems. Let Goans grow ; after some time let them come to Maharashtra or Mysore. It is for them to decide. Who are we to decide ? We cannot decide for others.

With regard to the language it is better my friends know certain important facts about Marathi and Kannada Languages. About 86 per cent of the people of Goa know Konkani. It is the people who speak that Konkani language that should decide whether Konkani is the dialect of Kannada or Marati. What Konkani people have done about this? In the year 1921there was a big Conference of Konkani people. They decided that Konkani should be mentioned as a distinct language and further in 1961 in the census report Konkani was treated as a separate new language. The Conference of the Konkani people and some famous Authors like Dr. Kathre and B. A. Sarotor have said that Konkani is independent of Marathi. When these have said that Konkani is not a dialect of Marati and when Konkani people themselves have declared that it is an independent

(SRI GANJI VEERAPPA)

ಶ್ರೀ ಡಿ. ಎಂ. ಸಿದ್ದಯ್ಯ.—ಅದರ ದೆಸೆಯಿಂದ ಕೊಂಕಣಿ ಭಾಷೆ ಮಹಾರಾಷ್ಟ್ರದ ಅಧೀನಭಾಷೆ ಯಾಗಿದೆ, ಆ ಕೊಂಕಣಿ ಭಾಷೆ ಮಾತನಾಡತಕ್ಕ ಗೋವಾ ಪ್ರಜೆಗಳು ಮಹಾರಾಷ್ಟ್ರಕ್ಕೇ ಸೇರಬೇಕು ಎಂದು ಹೇಳುವುದರಲ್ಲಿ ಹುರುಳಿಲ್ಲವೆಂಬುದಾಗಿ ನಾವು ಸ್ಪಷ್ಟಪಡಿಸಿದ್ದೇವೆ. ಎರಡನೆಯದಾಗಿ ಚಾರಿತ್ರಿಕವಾಗಿ, ಭೌಗೋಳಿಕವಾಗಿ ಮಹಾರಾಷ್ಟ್ರಕ್ಕೂ ಗೋವಾಕ್ಕೂ ಯಾವ ವಿಧವಾದ ಸಂಬಂಧವೂ ಇಲ್ಲ. ಶ್ರೀಮಾನ್ ಸುಂತಣ್‌ಕರ್ ಅವರು ಮಹಾರಾಷ್ಟ್ರ ಹೇಗೆ ಗೋವಾದ ಮೇಲೆ ಆಡಳಿತ ನಡೆಸು ತ್ತಿತ್ತು ಎನ್ನುವ ಬಗ್ಗೆ ಅವರೇ ಸ್ವತಂತ್ರವಾಗಿ ಬರೆದಿರುವ ಚರಿತ್ರೆಯನ್ನು ಈ ಸಭೆಯ ಮುಂದೆ ಇಡುತ್ತಿದ್ದಾರೆಂದು ನನಗನ್ನಿಸಿತು. ನಿಜವಾಗಿ ಚಾರಿತ್ರಿಕವಾಗಿ ಒಂದು ಸಾವಿರ ವರ್ಷಗಳಿಂದಲೂ ಕರ್ಣಾಟಕದ ಆಳರಸರು ಗೋವಾದ ಬಗ್ಗೆ ಮೊದಲಿನಿಂದಲೂ ಗೋವಾಕ್ಕೂ ಕರ್ಣಾಟಕಕ್ಕೂ ಸಂಬಂಧವಿದೆಯೆಂದು ಹೇಳಿದ್ದಾರೆ. ಮೊನ್ನೆ ನಾನೂ ಮತ್ತು ನನ್ನ ಸ್ನೇಹಿತರು ಗೋವಾಕ್ಕೆ ಹೋದಾಗ ಅಲ್ಲಿ ಒಂದು ವಸ್ತುಪ್ರದರ್ಶನ ಮಾಡಿದರು. ಅಲ್ಲಿನ ಕನ್ನಡ ಶಿಲಾಶಾಸನಗಳನ್ನು ನೋಡಿದಮೇಲೆ ಕರ್ಣಾಟಕಕ್ಕೂ ಗೋವಾಕ್ಕೂ ಎಷ್ಟರಮಟ್ಟಿಗೆ ಸಂಬಂಧವಿದೆಯೆಂಬುದು ಚೆನ್ನಾಗಿ ಗೊತ್ತಾಯಿತು. ಅವೆಲ್ಲವನ್ನೂ ಆ ವಸ್ತುಪ್ರದರ್ಶನದಲ್ಲಿ ಪ್ರದರ್ಶನ ಮಾಡಿದ್ದುದನ್ನು ನಾವು ನೋಡಿದ್ದೇವೆ. ಈಗ ಆ ವಿಚಾರದಲ್ಲಿ ಒಂದು ಮಾತನ್ನು ಹೇಳುವುದಾದರೆ ಚಾರಿತ್ರಿಕವಾಗಿ, ಭೌಗೋಳಿಕವಾಗಿ ಗೋವಾಕ್ಕೂ ಮೈಸೂರಿಗೂ, ಕರ್ಣಾಟಕಕ್ಕೂ ಇರುವ ಸಂಬಂಧ ಎಂದೆಂದಿಗೂ ಮಹಾರಾಷ್ಟ್ರಕ್ಕಿಲ್ಲವೆಂಬುದು ಸ್ಪಷ್ಟವಾಯಿತು. ಆದರೆ ನನ್ನ ಸ್ನೇಹಿತರು ಈ ಬಗ್ಗೆ ಹೆಚ್ಚಿಗೆ ಹೇಳುವುದು ನ್ಯಾಯ. ಮಾನ್ಯ ಸಭಾಪತಿಗಳಾಗಿರುವವರಾದ ತಾವೇ ಒಂದು ಪ್ರಶ್ನೆಯನ್ನು ಕೇಳಿದಿರಿ. ಅದಕ್ಕೆ ಸಮಾಧಾನಕರವಾದ ಉತ್ತರ ಅವರಿಂದ ತಮಗೆ ಬಂದಿಲ್ಲ. ಮಹಾರಾಷ್ಟ್ರ ಕಾಂಗ್ರೆಸ್ ನವರು ಗೋವಾ ಸಮಿತಿಗೆ ಅವರ ಉಮೇದುವಾರರಿಗೆ ಸಹಾಯ ಮಾಡುತ್ತಿದ್ದಾರೆಯೇ ಎಂದು ಇವತ್ತಿನ ದಿವಸ ಗೋವಾ ಕಾಂಗ್ರೆಸ್ಸಿನಲ್ಲಿ ಕಾಂಗ್ರೆಸ್ ತತ್ವದ ಅಭಿಪ್ರಾಯವನ್ನು ಹೊಂದಿದ್ದಾರೆ ಮಹಾರಾಷ್ಟ್ರ ನಾಯಕರು ಮಾಡಿದ ಭಾಷಣದಿಂದ ಮಹಾರಾಷ್ಟ್ರದಲ್ಲಿ ಏನೇನು ಕೆಲಸಗಳನ್ನು ನಡೆಸಿದ್ದಾರೆ ಎಂಬುದು ಗೋವಾಕ್ಕೆ ಹೋದರೆ ಗೊತ್ತಾಗುತ್ತದೆ. ಗೋವಾಕ್ಕೆ ಹೋಗದೆ ಇದ್ದ ಪಕ್ಷದಲ್ಲಿ ನಮಗೆ ಆ ವಿಚಾರ ತಿಳಿಯುವುದಿಲ್ಲ. ಈಗ ಮಹಾರಾಷ್ಟ್ರ ಮುಖಂಡರೇ ಆಗಲೀ, ಅಥವಾ ಕರ್ಣಾಟಕದ ಮುಖಂಡರೇ ಆಗಲೀ ಅಥವಾ ಇಡೀ ಭರತಖಂಡದ ಮುಖಂಡರೇ ಆಗಲೀ ಭರತಖಂಡ ಸ್ವತಂತ್ರವಾಗಿದೆ, ಗೋವಾ ಸ್ವತಂತ್ರವಾಗಿದೆಯೆಂದು ಹೇಳ ಬಹುದು. ಆದರೆ ನಾವು ಯಾವ ಭಾಗದಲ್ಲಿದ್ದರೂ ಕೂಡ ಒಂದು ದೇಶದ ಭದ್ರತೆ ಮತ್ತು ಐಕ್ಯತೆ ಗೋಸ್ಕರ ಕೆಲಸ ಮಾಡಬೇಕು ಎಂಬುದನ್ನು ಮರೆತು ಅದನ್ನು ದೊಡ್ಡ ಸಮಸ್ಯೆಯನ್ನಾಗಿ ಮಾಡಿ ಯಾವ ಕಡೆ ಸೇರಬೇಕೆಂಬ ಬಗ್ಗೆ ಶಕ್ತಿ ಸಾಮರ್ಥ್ಯಗಳನ್ನು ಉಪಯೋಗಿಸುವಂಥಾದ್ದು ನಿಜವಾಗಿ

(ಶ್ರೀ ಡಿ. ಎಂ. ಸಿದ್ದಯ್ಯ)

ಬಹಳ ಶೋಚನೀಯವಾದ ವಿಚಾರವೆಂದು ನಾನು ಈ ಸಭೆಯ ಮುಂದೆ ತಿಳಿಸುತ್ತೇನೆ. ಸುಮಾರು 450 ವರ್ಷಗಳ ಕಾಲ ಗೋವೆ ಬೇರೆ ಜನರ ಗುಲಾಮಗಿರಿಯಲ್ಲಿದ್ದು ಈಗ ತನ್ನ ಕಾಲಿನ ಮೇಲೆ ನಿಲ್ಲಬೇಕಾದ ಪರಿಸ್ಥಿತಿ ಒದಗಿದೆ. ಇಷ್ಟು ಹೊತ್ತಿಗೆ ಸರ್ವತೋಮುಖವಾದ ಪ್ರಗತಿಯನ್ನು ಅದು ಪಡೆಯಬೇಕಾಗಿತ್ತು. ಅದು ನಿಜವಾಗಿ ಕೇಂದ್ರಸರ್ಕಾರದ ಅಧೀನಕ್ಕೊಳಗಾಗಿದೆ. ಆದ್ದರಿಂದ ಗೋವವನ್ನು ಆರ್ಥಿಕವಾಗಿ, ಸಾಮಾಜಿಕವಾಗಿ ಮುಂದುವರಿಸಬೇಕಾದುದು ಅತಿ ಮುಖ್ಯವಾದುದಾಗಿದೆ. ಅದು ಮೈಸೂರಿಗೇ ಸೇರಲಿ, ಮಹಾರಾಷ್ಟ್ರಕ್ಕೇ ಸೇರಲಿ ಆರ್ಥಿಕಸ್ಥಿತಿ ನಮ್ಮದು, ಅವರದು ಎಷ್ಟಿದೆಯೆಂಬುದನ್ನು ವಿಚಾರ ಮಾಡಬೇಕು. ಗೋವಾ ಯಾವ ರೀತಿ ಅಭಿವೃದ್ಧಿಯಾಗಬೇಕೆಂಬ ಬಗ್ಗೆ ನಮ್ಮ ಮಹಾರಾಷ್ಟ್ರದ ಸ್ನೇಹಿತರೂ ಯೋಚನೆ ಮಾಡಬೇಕು, ನಾವೂ ಸಹ ಯೋಚನೆ ಮಾಡಬೇಕಾಗಿದೆ. ಆದರೆ ಮೈಸೂರಿನವರು ಗೋವಾವನ್ನು ಒತ್ತಾಯಪೂರ್ವಕವಾಗಿ ಸೇರಿಸಬೇಕೆಂದು ಎಂದಿಗೂ ಹೇಳುವುದಿಲ್ಲ. ಈ ವಿಚಾರದಲ್ಲಿ ಗೋವಾದ ಜನತೆಗೆ ಸರ್ವಸ್ವತಂತ್ರವಾದ ಅಧಿಕಾರವಿದೆ. ಅದಕ್ಕೆ ಎಲ್ಲರೂ ಮಾನ್ಯತೆ ಕೊಡಬೇಕಾಗಿದೆ. ನಾವೇನೋ ಅದನ್ನು ಒತ್ತಾಯಪೂರ್ವಕವಾಗಿ ಮೈಸೂರಿಗೆ ಸೇರಿಸಬೇಕೆಂದು ಪ್ರಯತ್ನ ಮಾಡುವುದಿಲ್ಲ. ಕೇಂದ್ರ ಸರ್ಕಾರದವರು ಹೇಳಿರುವ ಪ್ರಕಾರ ಗೋವಾ 10 ವರ್ಷಗಳ ಕಾಲ ಹಾಗೆಯೇ ಇರಬೇಕು. ಮಂಗಳೂರಿನಲ್ಲಿ ನಡೆದ ಪ್ರದೇಶ ಕಾಂಗ್ರೆಸ್ ಸಮಿತಿಯ ಸಭೆಯಲ್ಲಿ 10 ವರ್ಷಗಳ ಕಾಲದವರೆಗೆ ಗೋವಾ ಕೇಂದ್ರ ಸರ್ಕಾರದ ಆಡಳಿತದಲ್ಲಿಯೇ ಇರತಕ್ಕದ್ದು ಎಂಬುದಾಗಿ ನಿರ್ಣಯ ಮಾಡಿದ್ದಾರೆ. ಆ ರೀತಿ 10 ವರ್ಷಗಳವರೆಗೆ ಕೇಂದ್ರದ ಆಡಳಿತದಲ್ಲಿದ್ದು ಸರ್ವತೋಮುಖವಾದ ಪ್ರಗತಿಯನ್ನು ಪಡೆದು ಕೊನೆಗೆ, ಮೈಸೂರಿನಲ್ಲಿ ಸೇರಬೇಕೇ, ಬೇಡವೇ ಎಂದು ನಿರ್ಧರಿಸುವ ಸ್ವಾತಂತ್ರ್ಯ ಗೋವೆಯ ಜನರಿಗೆ ಇರಬೇಕಾದುದು ಪ್ರಜಾಪ್ರಭುತ್ವದಲ್ಲಿ ಮೊದಲನೆಯ ಧರ್ಮ. ನಾವು ಇತರ ದೇಶಗಳೊಡನೆ ಹೋಲಿಸಿದರೆ ಗೋವೆಯ ಜನರಂತೆಯೇ, ಸಾಮ್ರಾಜ್ಯಶಾಹಿ ಆಡಳಿತದಲ್ಲಿ ಸಿಕ್ಕಿದ್ದ ಇತರ ಜನರೂ ಕಷ್ಟಗಳಿಗೆ ಈಡಾಗಿ, ಪರಿತಪಿಸುತ್ತಿದ್ದಾರೆ. ಅಂಥ ಜನರಿಗೆ ತಮ್ಮ ಒಂದು ಸ್ವಂತ ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕೆ ಕಾಲಾವಕಾಶ ಕೊಡದೆ ಗೋವೆಯನ್ನು ಒತ್ತಾಯಪೂರ್ವಕವಾಗಿ ತಮ್ಮ ರಾಜ್ಯಕ್ಕೆ ಸೇರಿಸುತ್ತೇವೆ ಎಂದು ನಮ್ಮ ಒಂದು ಭಾಗದ ಜನರು ಹೇಳುವುದು ಪ್ರಜಾಪ್ರಭುತ್ವಕ್ಕೆ ವಿರೋಧವೆಂದು ಹೇಳುತ್ತೇನೆ. ಅನೇಕ ಶತಮಾನಗಳಿಂದ ಈ ರೀತಿ ಇದ್ದಂಥ ಗೋವಾವನ್ನು ಭಾಷಾ ಶಕ್ತಿಯಿಂದ ವಶಪಡಿಸಿಕೊಳ್ಳುವುದನ್ನು ಯಾವ ಪ್ರಜಾಪ್ರಭುತ್ವ ರಾಜ್ಯವೂ ಒಪ್ಪುವುದಿಲ್ಲವೆಂಬುದನ್ನು ನಾನು ಈಗ ತಿಳಿಸಬೇಕಾಗಿದೆ. ಈ ದೃಷ್ಟಿಯಿಂದ ಗೋವಾದಲ್ಲಿ ಬಹುಮತ ಸರ್ಕಾರ ನಡೆಯುತ್ತಿದೆ. ಕೇವಲ ಒಂದೆರಡು ಜನಾಂಗಗಳು ಜಾಸ್ತಿಯಾಗಿ ಗೋವಾ ಮೈಸೂರಿನಲ್ಲಿ ವಿಲೀನವಾಗಬಾರದೆಂಬ ಅಭಿಪ್ರಾಯವಿದೆಯಷ್ಟೆ. ಆದರೆ ಅಲ್ಲಿ ಹೆಚ್ಚಿಗೆ ಮೈಸೂರಿನಲ್ಲಿಯೇ ಗೋವ ವಿಲೀನವಾಗತಕ್ಕದ್ದು ಎಂಬ ಬಗ್ಗೆ ಸಾಕಷ್ಟು ಅಭಿಪ್ರಾಯವಿದೆಯೆಂಬುದನ್ನು ನಾನು ಈ ಸಭೆಯ ಗಮನಕ್ಕೆ ತರಬೇಕೆಂದು ಇಚ್ಛಿಸುತ್ತೇನೆ. ಹೆಚ್ಚಿಗೆ ಆ ವಿಷಯದಲ್ಲಿ ಪ್ರಸ್ತಾಪ ಮಾಡುವುದು ಈಗ ಸಮಯವಲ್ಲ. ಮಹಾ ಪ್ರಧಾನಿಯವರು ಗೋವೆಯ ನಿಲುವಿನ ವಿಷಯದಲ್ಲಿ ಹೇಗೆ ಆಶೆ-ಆಕಾಂಕ್ಷೆಗಳನ್ನು ಇಟ್ಟುಕೊಂಡಿದ್ದರೋ ಹಾಗೆಯೇ ಅದನ್ನು ಪಾಲಿಸಿಕೊಂಡು ಬರುವ ಕೆಲಸ ಈಗ ನಮ್ಮದಾಗಿದೆ. ಹಾಗೆಯೇ ಮಹಾರಾಷ್ಟ್ರದವರದೂ ಆಗಿದೆ ಎಂಬುದಾಗಿ ನಾನು ಈ ಸಭೆಯ ಗಮನಕ್ಕೆ ತರುತ್ತಿದ್ದೇನೆ. ಅಲ್ಲದೆ ಮಹಾ ಪ್ರಧಾನಿಯವರು ಗೋವಾ ಕಾಂಗ್ರೆಸ್ಸಿನ ಅಧ್ಯಕ್ಷರಿಗೆ ಪತ್ರವ್ಯವಹಾರಗಳನ್ನು ಈ ವಿಚಾರದಲ್ಲಿ ಬರೆದಿದ್ದವುಗಳ ಪೈಕಿ ಒಂದೆರಡು ಪತ್ರಗಳನ್ನು ಇಲ್ಲಿ ಓದಿ ಸಭೆಯ ಗಮನಕ್ಕೆ ತರುತ್ತೇನೆ. ಮಹಾ ಪ್ರಧಾನಿಯವರು 1963ನೇ ಇಸವಿ ಸೆಪ್ಟೆಂಬರ್ 9ರಲ್ಲಿ ಗೋವಾ ಕಾಂಗ್ರೆಸ್ ಅಧ್ಯಕ್ಷರಿಗೆ ಬರೆದ ಪತ್ರವನ್ನು ಓದುತ್ತೇನೆ. ಅದು ಈ ರೀತಿ ಇದೆ :—

5-00 P.M.

Sri B. R. SUNTHANKAR.—On a point of order. He is reading some private letter. I want to know firstly whether a private letter can be read on the floor of the House. Secondly can we take them as authentic? According to me this cannot be read on the floor of the House. The second point is we cannot know the authenticity of it. How can we take them to be authentic? These letters should not be allowed to be read by the Member.

Mr. SPEAKER.—A point of order is raised that a private letter is read and it may or may not be authentic. Let me deal with the first point about authenticity. I have to take it as correct when any Member says that it is authentic; if another member says that he knows that it is not authentic, then alone I can say there is some sort of conflict. If another member does not say that it is not authentic, how are we to know that it is not authentic?

Sri B. R. SUNTHANKAR.—Can he read private letters?

Mr. SPEAKER.—If any Member says that he acts on the belief that it is authentic, how can I have better evidence before me to say that it is a spurious letter. I have to respect every member and proceed with the presumption that what he says is correct, until it is proved otherwise. If there is any contradictory aspect, I will certainly permit. Authenticity does not really worry me. The other point is about the private letter. There is no distinction between private and public letters so far as these matters are concerned. The real point is if it is an official secret or if it is otherwise inadmissible or otherwise irrelevant. If the member tries to convince me that it is irrelevant I will apply my mind. But to say only public letter should be read, it will be curtailing the Debate in a manner to which I cannot say I will be a party. Relevant facts are there. Whether it is a public letter or private letter, there are facts. If the late Prime Minister had said so, it is relevant. If he did not say that, it is not relevant because it is a spurious statement. Public or private letter is not the distinction which can be applied for this purpose of the point of order.

Sri B. R. SUNTHANKAR.—How can we say that it is a genuine letter?

Mr. SPEAKER.—My difficulty is still in the domain of 'might have been'. The member does not go beyond and say that it is not authentic. He cannot take me round and round that it might not have been authentic and therefore. I should disallow it. A doubt is suggested and not a fact asserted. It will be too much for me. I have no right to curtail the Debate on that ground.

ಶ್ರೀ ಡಿ. ಎಂ. ಸಿದ್ದಯ್ಯ.—ಗತಿಸಿದ ಮಹಾ ಪ್ರಧಾನಿ ನೆಹರೂ ಅವರು ಗೋವಾ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಪುರುಷೋತ್ತಮ್ ಕಾಡ್ಕೇರ್ ಅವರಿಗೆ ಬರೆದಂತಹ ಪತ್ರ. ಇದು ಯಾವ ಪ್ರೈವೇಟ್ ಲೆಟರೂ ಅಲ್ಲ. ಸಾಕಷ್ಟು ಜವಾಬ್ದಾರಿಯಿಂದ ಕೂಡಿದ ಮಾತನ್ನು ನಾನು ಈ ಸಭೆಯ ಗಮನಕ್ಕೆ ತರುತ್ತೇನೆ.

Sri N. O. SAMAJI.—(in Marathi)

Mr. SPEAKER.—I have already said that what has been read out is relevant. If any relevant document is referred to, there is nothing I can disallow. That is why I cannot make a distinction between private and public letter. No new point other than what has been mentioned by Sri Sunthankar was raised by the Hon'ble Member.

Sri D. M. SIDDIAH.—It reads thus :—

"I see that some people are laying great stress on the merger of Goa with Maharashtra. I think this is very wrong and foolish of them. I have said that the future of Goa will be decided by the people of Goa. That does not mean that so soon after liberation we should consider the merger of Goa with Maharashtra or any such other subject. For the present, it is essential that Goa should remain a Union Territory and settle down. That new elections that are taking place are on the basis of that Union Territory. This will be not only advantageous to Goa in many ways, but will also prove to the Goan people that we are not rushing them in to any decision at this early stage. It is clear that the Government of India is not going to agree in the near future to any merger. About the distant future, I cannot say. Therefore, this position should be explained to the people of Goa."

ಈ ಪತ್ರವನ್ನು ಬರೆದಮೇಲೆ ಮತ್ತೊಂದು ಪತ್ರವನ್ನು 1964ನೇ ಇಸವಿ ಜನವರಿ 2ನೇ ತಾರೀಖಿನಲ್ಲಿ ಗತಿಸಿದ ಮಹಾಪ್ರಧಾನಿಯವರು ಗೋವಾ ಕಾಂಗ್ರೆಸ್ ಅಧ್ಯಕ್ಷರಿಗೆ ಬರೆದಿದ್ದಾರೆ ಅದರಲ್ಲಿ ಈ ರೀತಿ ಬರೆದಿದ್ದಾರೆ.

"I have your letter without date. My view in regard to the merger of Goa with Maharashtra remain the same as they were before the election. I have said that merger is not desirable in the near future, in spite of the election. In the future this matter can be considered. It will have to be decided by the people of Goa.

I do not think that Roman Catholics alone are against merger. I know that many others are also not in favour of it. What I said, I think, was that apart from others, forty per cent of the people who were Roman Catholics, were against it"

ಮಾನ್ಯ ಸಭಾಪತಿಯವರೇ, ಈ ಎರಡು ಪತ್ರಗಳಿಂದ ಇವೊತ್ತು ಗೋವಾದಲ್ಲಿ ವಾಸಮಾಡತಕ್ಕಂಥ ಶೇಕಡಾ 40 ಭಾಗಕ್ಕಿಂತಲೂ ಹೆಚ್ಚಿಗೆ ಇರತಕ್ಕಂಥ ಕ್ರಿಶ್ಚಿಯನ್ ಸಹೋದರರು ಮಹಾರಾಷ್ಟ್ರದ ಜೊತೆಗೆ ವಿಲೀನವಾಗಲು ವಿರೋಧವಾಗಿದ್ದಾರೆ. ಮಹಾ ಪ್ರಧಾನಿಯವರು ಹೇಳಿದಂತೆ ಕ್ರಿಶ್ಚಿಯನರಲ್ಲದೆ ಇನ್ನೂ ಬಹುಭಾಗದ ಜನರು ಮಹಾರಾಷ್ಟ್ರಕ್ಕೆ ಸೇರಲು ವಿರೋಧವಾಗಿರುವಂತಹ ಪರಿಸ್ಥಿತಿಯಲ್ಲಿ ಮಹಾರಾಷ್ಟ್ರದ ಮುಖಂಡರುಗಳು ಗೋವೆಯನ್ನು ಮಹಾರಾಷ್ಟ್ರಕ್ಕೆ ಸೇರಿಸಬೇಕು ಎಂದು ಮಾಡಿದಂತಹ ನಿರ್ಣಯದಮೇಲೆ ಕೇಂದ್ರದ ಪಾರ್ಲಿಮೆಂಟ್ ಬೋರ್ಡಿನವರು ಗೋವೆಯು 10 ವರ್ಷಗಳಕಾಲ ಕೇಂದ್ರದ ಆಡಳಿತದಲ್ಲಿ ಇರಬೇಕು, ಆ ಮೇಲೆ ಗೋವಾದ ಭವಿಷ್ಯವನ್ನು ನಿರ್ಧಾರ ಮಾಡಬೇಕೆಂದು ಏನು ಅವರು ತೀರ್ಮಾನ ಮಾಡಿದ್ದಾರೆಯೋ ಅದನ್ನು ಈಗ ಬದಲಾಯಿಸಬೇಕು ಎಂದು ಒತ್ತಾಯ ಪಡಿಸುವುದು ಪ್ರಜಾಪ್ರಭುತ್ವ ತೀರ್ಮಾನಕ್ಕೆ ವಿರೋಧವಾಗಿದೆ. ಇವೊತ್ತು ಮೈಸೂರು ಸರ್ಕಾರ ಅಥವಾ ಮೈಸೂರು ಶಾಸನ ಸಭೆ ಆದರೂ ಕೂಡ ಇವೊತ್ತಿ ದಿವಸ ಈ ಬಗ್ಗೆ ಏನು ಕೇಂದ್ರದವರು ಏನು ನಿಲುವನ್ನು ತೆಗೆದುಕೊಂಡಿದ್ದಾರೆಯೋ, ಮತ್ತು ಗತಿಸಿದ ಮಹಾಪ್ರಧಾನಿಯವರು ಈ ಬಗ್ಗೆ ಏನು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರೋ ಆ ಅಭಿಪ್ರಾಯವನ್ನು ನಾವು ಮನ್ನಣೆ ಮಾಡಿಕೊಂಡು ಬಂದಿದ್ದೇವೆ. 10 ವರ್ಷಗಳ ಕಾಲ ಗೋವಾ ಕೇಂದ್ರದ ಆಡಳಿತದಲ್ಲಿ ಇದ್ದರೆ ಅವರು ತಮ್ಮ ಭವಿಷ್ಯವನ್ನು ನಿರ್ಧರಿಸಿಕೊಳ್ಳತಕ್ಕ ಸಾಮರ್ಥ್ಯ ಉಂಟಾಗುತ್ತದೆ. ಆಗ ಅವರು ತಮ್ಮ ಕಾಲಮೇಲೆ ತಾವು ನಿಂತು ಅವರ ಮುಂದಿನ ಭವಿಷ್ಯವನ್ನು ನಿರ್ಧರಿಸಿಕೊಂಡು ಯಾವ ಪ್ರಾಂತಕ್ಕಾದರೂ ಸೇರುವುದರಿಂದ ಅವರಿಗೆ ಉತ್ತಮವಾಗುತ್ತವೆಯೇ ಅಥವಾ ಯಾವ ಪ್ರಾಂತಕ್ಕೂ ಸೇರದೆ ಹಾಗೆಯೇ ಕೇಂದ್ರದವರ ಜೊತೆಯಲ್ಲಿಯೇ ಇದ್ದರೆ ಅವರಿಗೆ

ಉತ್ತಮವಾಗುತ್ತದೆಯೇ ಎಂಬುದನ್ನು ಅವರೇ ನಿರ್ಧರಿಸಿಕೊಳ್ಳಬೇಕು. ಅವರ ಒಂದು ನಿರ್ಧಾರದ ಮೇಲೆ ಗೋವಾ ಭವಿಷ್ಯ ನಿಲ್ಲಬೇಕು. ಯಾವ ಪ್ರಾಂತದವರಾಗಲೀ ಒತ್ತಾಯದಮೇಲೆ ಅವರನ್ನು ಸೇರಿಸಿಕೊಳ್ಳುವುದರಿಂದ ಪ್ರಜಾಪ್ರಭುತ್ವಕ್ಕೆ ಅಪಚಾರ ಮಾಡಿದಂತಾಗುತ್ತದೆ. ಮತ್ತು ಗೋವಾದ ಭವಿಷ್ಯ ಏನಿದೆ ಅದಕ್ಕೆ ತೊಂದರೆಯುಂಟಾಗುತ್ತದೆ ಎಂದು ಹೇಳಿ ಶ್ರೀಮಾನ್ ದೊಡ್ಡಮೇಟಿಯವರು ಈ ಸಭೆಯು ಮುಂದೆ ಏನು ನಿರ್ಣಯವನ್ನು ತಂದಿದ್ದಾರೆಯೋ ಅದಕ್ಕೆ ನನ್ನ ಸಂಪೂರ್ಣವಾದ ಬೆಂಬಲವನ್ನು ಕೊಟ್ಟು ನಾನು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಚ್. ಆರ್. ಕೇಶವಮೂರ್ತಿ.—ಮಾನ್ಯ ಸಭಾಪತಿಗಳೇ, ಈಗ ಈ ಸಭೆಯಮುಂದೆ ಇರತಕ್ಕ ನಿರ್ಣಯದ ವಿಷಯದಲ್ಲಿ ಈಗಾಗಲೇ ಬಹಳ ಜನ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಈ ವಿಷಯದಲ್ಲಿ ನಾನು ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಈ ಸಂದರ್ಭದಲ್ಲಿ ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರುತ್ತೇನೆ. 'ಗೋವಾ ಕ್ರೈಸಿಸ್' ಎನ್ನುವ ಪುಸ್ತಕ ಒಂದನ್ನು ರಮೇಶ ತಾಪರ ಎನ್ನುವವರು ಒಬ್ಬರು ಬರೆದಿದ್ದಾರೆ.

Mr. SPEAKER.—There might have been plenty of literature this way or that way.

Sri H. R. KESHAVA MURTHY.—I wish to quote one or two sentences from that book.

Mr. SPEAKER.—Does the member not do something more? The Hon'ble Member may do something better.

Sri H. R. KESHAVAMURTHY.—These people want authenticated information.

Mr. SPEAKER.—If it is only that then I will ask the Hon'ble Member to resume his seat. Information can be given to other Members privately.

Sri H. R. KESHAVA MURTHY.—Sir, I may be permitted to read extracts from the book Goa Crisis by Ramesh Thapar.

Mr. SPEAKER.—There may have been plenty of literature this way or that way.

Sri H. R. KESHAVA MURTHY.—"In 1370 Goa became part of the great Vijayanagar Empire remaining under the Hindu Rule for a hundred years."

Mr. SPEAKER.—Was there no Goa before that?

Sri H. R. KESHAVA MURTHY.—

"About 200 BC after the Emperor Asoka, Goa passed under the way of the Kadambas of Banavasi whose remarkable King Trilochana is belived to have flourished in about 120 AD. This dynasty continued its rule till 1312 when Goa passed to the Mohammadans under Malik Kafur.

"In 1370 Goa became part of the great Vijayanagar Empire remaining under Hindu rule for a hundred years. In 1470, it was conquered by Mahommed Gawn, the general of Muhamed II the thirteenth Bahamani Sultan of the Deccan. Following the division of the Bhahamani Empire, Goa became a part of the domains of the Sultan of Bijapur.

"It was at this juncture, when it was a flourishing centre of trade and one of the starting points for pilgrims to Mecca, that Albuquerque and his fleet appeared on the horizon."

(SRI H. R. KESHAVA MURTHY)

By about 1510 Albuquerque got this from the Mahammadans and there was no trace of Maharashtrians entering the erena. These people claim it was Maharashtra territory and it is seen here there is no trace of Marathas.

Sri V. S. PATIL.—At that time there was no question of Marathas or others.

ಶ್ರೀ ಎಚ್. ಆರ್. ಕೇಶವಮೂರ್ತಿ.—ಇತ್ತೀಚೆಗೆ ನಮ್ಮ ಭಾರತ ದೇಶಕ್ಕೆ ಸ್ವಾತಂತ್ರ್ಯ ದೊರೆತ ಮೇಲೆ ಗೋವೆಯ ವಿಚಾರದಲ್ಲಿ ಗಲಾಟೆ ಜಾಸ್ತಿಯಾಗಿದೆ. ಬ್ರಿಟಿಷರು ಭಾರತ ದೇಶವನ್ನು ಬಿಟ್ಟು ಹೋದ ಮೇಲೆ ಪೋರ್ಚುಗೀಸರ ಆಡಳಿತಕ್ಕೆ ಒಳಪಟ್ಟ ಗೋವಾ ಮತ್ತು ಫ್ರೆಂಚರ ಆಡಳಿತದಲ್ಲೇ ಇದ್ದ ಕಾಲೋನಿಗಳು ಉಳಿದಿದ್ದವು. ಫ್ರೆಂಚರು ಪಾಂಡಿಚೇರಿ ಬಿಟ್ಟುಕೊಟ್ಟು ಹೋದರು. ಆದರೆ ಪೋರ್ಚ್‌ಗೀಸರು ತಮ್ಮ ವಶದಲ್ಲಿದ್ದ ಪ್ರದೇಶವನ್ನು ಬಿಟ್ಟುಕೊಡದೆ ಗಟ್ಟಿಯಾಗಿ ಉಳಿದಿದ್ದರು. ಇಂಡಿಯನ್ ನ್ಯಾಷನಲ್ ಕಾಂಗ್ರೆಸಿನವರು ಗೋವೆಯ ವಿಮೋಚನೆ ಬಗ್ಗೆ ಗಲಾಟೆ ಶುರು ಮಾಡಿದರು. ನಮ್ಮ ಭಾರತ ದೇಶದ ಹಿತ ದೃಷ್ಟಿಯಿಂದ ಗೋವೆಯಲ್ಲಿ ಪರಕೀಯರ ರಾಜ್ಯಾಡಳಿತದ ಪ್ರಭುತ್ವ ಇರುವುದು ನಮ್ಮ ದೇಶದ ಭದ್ರತೆಯ ದೃಷ್ಟಿಯಿಂದ ಉಚಿತವಲ್ಲ ಎಂದು ಭಾವಿಸಿ ಆದರ ವಿಮೋಚನೆಗಾಗಿ ಪ್ರಯತ್ನ ಮಾಡಿದರು. ಇದರ ಬಗ್ಗ ಒಂದು ಕಡೆ ಈ ರೀತಿ ಹೇಳಿದೆ :—

> "Two organisations undertook these first assaults. The Azad Gomantak Dal under the command of V. N. Lawande of Poona and the Goan People's party. Even before the Portuguese Power had been overwhelmed, tension mounted between these two organisations. Lawande's men inspired and financed by Hindu chavinist elements were out to grab as much territory as they could, and so, prevent the Goan People's Party, a progressive unity centre, from making its influence felt. Clashes occurred. Lawande was going to stop at nothing to disrupt the strength of the Goan People's Party, and to sow........"

(At this stage the Hon'ble Speaker was ringing the Bell)

"........to sow demoralization, particularly among the ranks of the Catholic mass........"

Mr. SPEAKER.—The purpose of ringing the Bell is to ask the Hon'ble Member to stop reading.

Sri H. R. KESHAVA MURTHY.—If I say anything they may not belive me sir.

Sri B. R. SUNTHANKAR.—You are thinking that you are saying something new. We have known all these facts and these are some activities in which we have participated.

Sri H. R. KESHVA MURTHY.—And this is from the Transcript of the Press conference held by the Prime Minister at Vigyan Bhavan, New Delhi, on December 28, 1961.

> "Question: What have to say about the future administrative set up in the light of the visit of the official team to Goa?
>
> Prime Minister: There is nothing much to say about it because we have not decided yet. The first thing to do is to get all the various normal social and other services functioning the normal

apparatus of Government. That is being done fairly rapidly, railways posts and telegraphs, etc. When that is completed the military authority there will be replaced by the civil authority. That will function for some little time. Later we will no doubt come up to Parliament for not only the incorporation of Goa into the Indian Union as we think as a separate entity under the Central Government but having local autonomy."

This is the very important thing Sir, you should understand.

"We have not yet worked out details of this yet. In the course of the next month or two months, we shall try to do that. But this can come up only before the new Parliament......"

That is what the late Prime Minister Pandit Nehru has said.

The people are saying so many things. In Goa percentage of election, it was 95. I should say it was not carried out under ideal circumstances. It is said that religion and casteism was exploited to the full, by the political compaigners.

This is what is said of Goan elections in the LINK of December 15, 1963:

There were three parties in the picture in Goa to fight elections: (1) the United Goan Party, (2) The Maharashtra Gomantak Dal (3) the Congress. It is said here:

" on most issues the Congress mainfesto was vague and visiting congress leaders spoke with two voices. For instance, on the merger question, which became the main election issue, Defence Minister Chavan indicated he was all in favour, while others supported Government's decision to keep Goa, Daman and Diu as Union territory."

MR. SPEAKER.—Sri Keshava Murthy should avoid the bringing in of names here. Throughout I have been trying to prevent mentioning of names.

SRI H. R. KESHAVA MURTHY.—Am I prohibited to read Sir ?

MR. SPEAKER.—Absolutely the member has no right to read from any book and every book. I do not want the opinion of any paper. We want his opinion.

SRI S. M. KRISHNA.—Sir, just now you allowed the name of the late Prime Minister Pandit Nehru to be brought into the debate. There is no doubt about the stand taken by the Union Defence Minister. To that extent it becomes relevant. We should not be barred from airing our views.

SRI V. S. PATIL.—According to our procedure, we are not to read any newspapers here. The Members may give their own views. My friend was reading from newspaper.

MR. SPEAKER.—That is exactly what I have been saying.

SRI V. S. PATIL.—My friend is reading excerpts from newspaper and that will not be correct.

Mr. SPEAKER.—A point of order has been raised.

Sri S. M. KRISHNA.—No Sir, I only submitted that the mention of the name is relevant to this extent.

Mr. SPEAKER.—If it is a point of order, I will give my ruling. If it is only a submission, I will feel enlightened by it. There is no point of order in it. It is true that the name of the late Prime Minister was mentioned by another Hon'ble Member. But there was no allegation made against any one. The purpose and the intention of that rule is to prevent anything being said by a Member about a person who is not here to defend against any allegation made. That is why I said, do not bring in names. Whenever such attempts are made, I have refused. Sri H. R. Keshava Murthy is doing exactly what I did not want. I very well appreciate the point mentioned by Sri V. S. Patil. We are here to gather our views and opinions. With all the reason we can and not the views expressed by any newspaper whatsoever, however big it might be. Simply because so and so said something is not a point to be brought before the House. There are very large number of papers expressing their own opinion. Are we going to gather their opinions? We are going to gather our opinion after debate. If it were so important, I would have permitted it.

ಶ್ರೀ ಎಚ್. ಆರ್. ಕೇಶವ ಮೂರ್ತಿ.—ಆದುದರಿಂದ ಕೆಲವು ಕಾಂಗ್ರೆಸ್ಸಿನ ಮುಖಂಡರುಗಳೇ ಅವರು ಕಾಂಗ್ರೆಸ್ಸಿನಲ್ಲಿದ್ದುಕೊಂಡೇ ತಮ್ಮ ಒಂದು ಜಾತೀಯ ವಾತ್ಸಲ್ಲದಿಂದಲೋ ದೇಶ ವಾತ್ಸಲ್ಯ ದಿಂದಲೋ ಆ ಮಹರಾಷ್ಟ್ರೀಯ ಗೋಮಾಂತಕ ಪಾರ್ಟಿಯಲ್ಲಿದ್ದ ಜನರಿಗೆ ಓಟು ಬರುವಂತೆ ಮಾಡಿ ಅವರು ತಮ್ಮ ಪಕ್ಷಕ್ಕೆ ದ್ರೋಹ ಮಾಡಿದ್ದಾರೆ. ಇನ್ನು ಇದೇ ರೀತಿಯಾಗಿ ಸಲೆಕ್ಷನ್ ಆಫ್ ಸೀಟ್ಸ್‌ಗಳ ವಿಚಾರದಲ್ಲೂ ಕಾಂಗ್ರೆಸ್ಸಿನವರು ಸೀಟುಗಳನ್ನು ಸರಿಯಾದ ನಿಜವಾದ ದೇಶಭಕ್ತರಿಗೆ ಕೊಡಲಿಲ್ಲ. ಅವರು ಸೀಟುಗಳನ್ನು ಕೆಲವು ಅಪರ್ಚುನಿಸ್ಟ್ಸ್‌ಗಳಿಗೆ ಕೊಟ್ಟರು. ಹೀಗೆ ಆ ಚುನಾವಣೆಯ ಪ್ರಾರಂಭದಲ್ಲೇ ಕಾಂಗ್ರೆಸ್ ಪಾರ್ಟಿಯವರಿಗೂ ಮತ್ತು ಮಹರಾಷ್ಟ್ರ ಗೋಮಂತ ಪಾರ್ಟಿ ಯವರಿಗೂ ಒಬ್ಬರಿಗೊಬ್ಬರಿಗೆ ವಿರೋಧಗಳುಂಟಾದವು. ಆಗ ಕೆಲವು ಮರಾಠೀ ಜನರು ಕಾಂಗ್ರೆಸ್ಸನ್ನು ಬಿಟ್ಟು ವಿರೋಧಪಕ್ಷಕ್ಕೆ ಸೇರಿಕೊಂಡರು. ಅಷ್ಟೇ ಅಲ್ಲ, ಅವರು ಕಾಂಗ್ರೆಸ್ಸಿಗೆ ಬರ ಬೇಕಾಗಿದ್ದ ಓಟ್ಸ್‌ಗಳನ್ನೆಲ್ಲಾ ವಿರೋಧಪಕ್ಷಕ್ಕೆ ಕ್ಯಾನ್‌ವಾಸ್ ಮಾಡಿ ಕಾಂಗ್ರೆಸ್ಸಿಗೆ ಬಹುಮತ ಬಾರ ದಂತೆ ಮಾಡಿದರು. ಹೀಗೆ ಅವರು ತಮ್ಮ ಒಂದು ಕಾಂಗ್ರೆಸ್ ಪಕ್ಷವೇನಿತ್ತು ಅದಕ್ಕೆ ದ್ರೋಹ ಮಾಡಿ ದ್ದಾರೆ. ಇಷ್ಟೇ ಅಲ್ಲ, ಇದರಲ್ಲಿ ಕೆಲವು ಬಂಡವಾಳ ಶಾಹಿಗಳು ಸೇರಿಕೊಂಡು ಆ ಚುನಾವಣೆಯ ಪಾವಿತ್ರ್ಯತೆಯನ್ನೇ ಕೆಡಿಸಿಬಿಟ್ಟರು. ಈ ಎಲ್ಲ ಕಾರಣಗಳಿಂದಲೂ ಈ ದಿವಸ ಅವರು ಮಾಡಿರತಕ್ಕ ನಿರ್ಣಯ ಸರಿಯಾದ್ದಲ್ಲ ಮತ್ತು ನ್ಯಾಯವಾದ್ದಲ್ಲ ಎಂತ ನಾನು ಹೇಳುತ್ತೇನೆ. ನಿಜವಾದ ದೇಶ ಭಕ್ತರು ಅಸೆಂಬ್ಲಿಯಲ್ಲಿದ್ದು ಪ್ರತಿಬಿಂಬಿಸುವಂಥ ನಿರ್ಣಯವಲ್ಲ ಅದು. ಹಾಗೇ ಅವರಿಗೆ ಬೇಕಾಗಿದ್ದರೆ ಮತ್ತೊಂದು ಚುನಾವಣೆಯನ್ನು ಮಾಡಲಿ. ನಿಜವಾದ ದೇಶಭಕ್ತರು ಆ ಅಸೆಂಬ್ಲಿಗೆ ಆರಿಸಿ ಬರಲಿ, ಅವರು ಒಂದು ನಿರ್ಣಯ ಪಾಸ್ ಮಾಡಲಿ, ಆಗ ನಾನು ಅವರು ಇಂಥ ಒಂದು ನಿರ್ಣಯವನ್ನು ಎಂದೂ ಮಾಡುವುದಿಲ್ಲ ಎಂಬುದಾಗಿ ಸವಾಲ್ ಮಾಡುತ್ತೇನೆ. ಅದ ಕಾರಣ ಈ ನಿರ್ಣಯ ನಂಬತಕ್ಕದಲ್ಲ ಎಂದು ನಾನು ಹೇಳುತ್ತೇನೆ. ಬಹಳ ಕಾಲ ಆ ಗೋವೆಯ ಜನರು ಪೋರ್ಚುಗೀಸರ ಆಡಳಿತದಲ್ಲಿದ್ದುದರಿಂದ ಅವರಿಗೆ ಓಟು ಎಂದರೇನು, ಓಟಿನ ಬಲವೇನು ಎಂಬುದೇ ಸರಿಯಾಗಿ ಗೊತ್ತಿರುವುದಿಲ್ಲ. ಕೇವಲ 20 ಸಾವಿರ ಜನರು ಓಟ್‌ಮಾಡಿದಂಥ ಜನರ ಒಂದು ಅಸೆಂಬ್ಲಿ ಅಲ್ಲಿತ್ತು. ಇಂಥ ಒಂದು ಪರಿಸ್ಥಿತಿ ಯಲ್ಲಿರತಕ್ಕ ಜನರು ಈ ದಿವಸ ಯಾವುದೋ ಒಂದು ಎಕ್ಸ್‌ಟರ್ನಲ್ ಇನ್‌ಫ್ಲುಯೆನ್ಸಿಗೆ (ಹೊರಗಿನ ಪ್ರಭಾವಕ್ಕೆ) ಒಳಗಾಗಿ ಒಂದು ನಿರ್ಣಯವನ್ನು ಏನು ಅವರೀದಿವಸ ಪಾಸ್ ಮಾಡಿದ್ದಾರೆ ಅದನ್ನೇ ಒಂದು ವೇದವಾಕ್ಯವೆಂದು ನಮ್ಮ ಕೇಂದ್ರ ಸರ್ಕಾರ ನಂಬಬಾರದು. ಇಲ್ಲಿಯವರೆಗೂ ಕೇಂದ್ರ ಸರ್ಕಾರದವರು ಗೋವಾ ಫಾರ್‌ಗೋವನ್ಸ್ ಎಂತ ಹೇಳಿದ್ದ ಕಾರಣದಿಂದ ನಾವು ಅಂದರೆ ಮೈಸೂರಿ ನವರಾದ ನಾವು We kept quit as gentlemen. ನಾವು ಈ ರೀತಿಯಾಗಿ ಸುಮ್ಮನಿರುವಾಗ ನಮ್ಮ ಪಕ್ಕದ ದೇಶದವರು ರಾಜಕೀಯದಲ್ಲಿ ಮುಖಂಡರಾಗಿರತಕ್ಕವರು ನಮ್ಮನ್ನು ಕೆಣಕಿದಾಗ ಇಂಥ ಒಂದು ಹೇಳಿಕೆಯನ್ನು ಕೊಟ್ಟಾಗ ನಾವು ಸುಮ್ಮನಿರತಕ್ಕದ್ದು ಸರಿಯಲ್ಲ. ನಾನು ಚಿಕ್ಕಹುಡುಗ

ನಾಗಿದ್ದಾಗ ಕ್ರಿಕೆಟ್ ಆಟದ ಒಂದು ಸಂದರ್ಭದಲ್ಲಿ ನಾನು ಓದಿದ್ದ ಒಂದು ವಿಚಾರ ನನಗೀಗ ಜ್ಞಾಪಕಕ್ಕೆ ಬರುತ್ತಿದೆ ಅದೇನೆಂದರೆ–,'ಟು ಷರ್ಕ್ ಈಸ್ ಫಾಲ್' ಇಂಥ ಸಮಯದಲ್ಲಿ ನಾವು ಸುಮ್ಮನೆ ಕಣ್ಣು ಮುಚ್ಚಿಕೊಳಿತರೆ ಅದು ನಮ್ಮ ಒಂದು ತಪ್ಪಾಗುತ್ತದೆ. ಹಾಗೂ ಅದರಿಂದ ನಮಗೆ ಅವಮಾನವಾದಂತೆ. ಅವರು ಹೀಗೆ ಅಗ್ರೆಷನ್ ಮಾಡುವುದಕ್ಕೆ ಪ್ರಯತ್ನಮಾಡುತ್ತಿರುವುದನ್ನು ನಾವು ನೋಡುತ್ತಿದ್ದರೂ ಕಾಣದಂತೆ ವರ್ತಿಸುವುದು ಸರಿಯಾದ್ದಲ್ಲ. ಗೋವೆಯ ಒಂದು ಭವಿಷ್ಯದ ವಿಚಾರ ಗೋವೆಯವರ ಕೈಲಿ ಇದೆ ಎಂತ ಹೇಳುತ್ತಾ ಹೀಗೆ ಒಂದು ಪಕ್ಕದದೇಶದವರ ದಬ್ಬಾಳಿಕೆಗೆ ನಾವು ಅವಕಾಶಕೊಟ್ಟರೆ ಅದು ಬಹಳ ಅನ್ಯಾಯ ಮಾಡಿದಂತಾಗುವುದು. ಹಾಗೆ ನ್ಯಾಯವಾಗಿ ನೋಡುವುದಾದರೆ ಆ ಗೋವೆ ನಮ್ಮ ಮೈಸೂರು ರಾಜ್ಯಕ್ಕೇ ಸೇರಬೇಕು. ನಾವೀದಿವಸ ನಮ್ಮ ಪಕ್ಕದ ರಾಜ್ಯಕ್ಕೆ ಹೀಗೊಂದು ದಬ್ಬಾಳಿಕೆನಡೆಸಲು ಅವಕಾಶ ಕೊಟ್ಟರೆ ನಾಳೆ ಆ ಗೋವೆಯ ಜನರಿಗೆ ಒಂದು ಫ್ರೀಲೈಫ್ ಎಂಜಾಯ್ ಮಾಡುವುದಕ್ಕೆ ಅವಕಾಶವಿರುವುದಿಲ್ಲ. ಈ ದಿವಸ ಸಾಮಾನ್ಯವಾಗಿ ಗೋವೆಯನ್ನು ಎಲ್ಲರೂ 'ವ್ಯಾಟಿಕಾನ್‌ಆಫ್ ದಿ ಈಸ್ಟ್' ಎಂದು ಹೇಳುತ್ತಿದ್ದಾರೆ. ಅಲ್ಲಿ ಒಂದು ದೊಡ್ಡ ಸೆಯಿಂಟ್ ಕ್ಸೇವಿಯರ್ಸ್ ಚರ್ಚ್ ಇದೆ. ಇದರ ಪ್ರತಿವರ್ಷದ ಒಂದು ಮೆಮೋರಿಯಲ್‌ಗಾಗಿ ಅಲ್ಲಿ ಲಕ್ಷೋಪಲಕ್ಷ ಜನ ಬರುತ್ತಿದ್ದಾರೆ. ಅಲ್ಲಿ ಒಂದು ದೊಡ್ಡ ಜಾತ್ರೆಯೇ ನಡೆಯುತ್ತದೆ. ಇಂಥ ಒಂದು ಯಾತ್ರಾಸ್ಥಳವನ್ನು ನಾವು ಈ ದಿವಸ ಇಂಥ ಒಂದು ಅಗ್ರೆಸ್ಸೀವ್ ಮೈಂಡ್ ಇರತಕ್ಕ ಜನರ ಕೈ ಸೇರುವುದಕ್ಕೆ ಅವಕಾಶ ಕೊಟ್ಟರೆ ನಾಳೆ ಅಲ್ಲಿ ಸುಸೂತ್ರವಾಗಿ ಆ ಜಾತ್ರೆ ನಡೆಯುವುದಕ್ಕೆ ಸಾಧ್ಯವಿದೆಯೇನು ? ಅದಕ್ಕೂ ನಾಳೆ ದೊಡ್ಡ ತೊಂದರೆ ಬರಬಹುದು. ಈ ದಿವಸ ಕಾಂಗ್ರೆಸ್ ಪಕ್ಷದವರೇ ಆ ಕೇಂದ್ರ ಸರ್ಕಾರದ ಆಡಳಿತನಡೆಸತಕ್ಕವರು, ಮಹರಾಷ್ಟ್ರದಲ್ಲೂ ಆಡಳಿತನಡೆಸತಕ್ಕವರು ಆ ಕಾಂಗ್ರೆಸ್ ಪಕ್ಷದವರೇ, ಹೀಗೆ ಒಂದು ಪಕ್ಷಕ್ಕೆ ಸೇರಿರತಕ್ಕ ಜನರು ತಮ್ಮ ಪಾರ್ಟಿಗೆ ವಿರೋಧವಾಗಿ, ವಿರೋಧ ಪಕ್ಷಕ್ಕೆ ಅನುಕೂಲವಾಗುವಂತೆ ಆ ಪಕ್ಕದರಾಜ್ಯದ ವಿರೋಧಪಕ್ಷಕ್ಕೆ ಸಹಾಯಮಾಡಿ ಹೀಗೆ ಒಂದು ನಿರ್ಣಯವನ್ನು ಪಾಸ್‌ಮಾಡಿರತಕ್ಕದ್ದು ಸರಿಯೇ ? ಇದು ನ್ಯಾಯವೇ ? ದೇಶದ ಹಿತದೃಷ್ಟಿಯಿಂದ ಮತ್ತು ಎಮೋಷನಲ್ ಇಂಟಿಂಗ್ರೇಷನ್ನಿಗೆ ಇದು ಸರಿಹೋಗುತ್ತದೆಯೇ ಎಂದು ನಾನು ಕೇಳುತ್ತೇನೆ. ಇಷ್ಟು ಮಾತನ್ನು ಹೇಳಿ ನನಗೆ ಇನ್ನು ಹೆಚ್ಚಿನ ಕಾಲಾವಕಾಶವಿಲ್ಲದ್ದರಿಂದ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ಭಾಸ್ಕರ ಶೆಟ್ಟಿ (ಕಾಪು).—ಸ್ವಾಮಿ, ಈ ಮಾನ್ಯ ಸಭೆಯ ಮುಂದೆ ಶ್ರೀಮಾನ್ ಎ. ಜೆ. ದೊಡ್ಡಮೇಟಿಯವರು ಮಂಡಿಸಿರತಕ್ಕ ವಿಶೇಷ ನಿರ್ಣಯವನ್ನು ನಾನು ಅನುಮೋದಿಸುತ್ತಾ ಒಂದೆರಡು ಮಾತುಗಳನ್ನು ಆಡಬಯಸುತ್ತೇನೆ.

ಸ್ವಾಮಿ, ನಮ್ಮ ದೇಶದ ಪ್ರಕೃತ ಪರಿಸ್ಥಿತಿಯನ್ನು ನೋಡುವುದಾದರೆ ದೊಡ್ಡ ಗಂಡಾಂತರವೇ ಉಂಟೆಂದು ಹೇಳಬಹುದು. ನಮ್ಮ ರಾಷ್ಟ್ರದ ಉತ್ತರ ಮತ್ತು ಪೂರ್ವದ ಗಡಿಗಳಲ್ಲಿ ಚೀಣೀಯರ ಮತ್ತು ಪಾಕೀಸ್ಥಾನಿಗಳ ಕಿರುಕುಳ ಜಾಸ್ತಿಯಾಗಿದೆ. ನಮಗೆ ಅಂತರೀಕವಾಗಿಯೂ ರಾಜ್ಯದ ಒಳಗಡೆ ಆಹಾರ ಸಮಸ್ಯೆ ಹಾಗೂ ಆರ್ಥಿಕ ಸಮಸ್ಯೆಗಳು ನಮ್ಮನ್ನು ಎದುರಿಸುತ್ತಿವೆ. ಅತ್ತ ಆ ಗೋವಾದರ್ಲ್ಲಾದರೂ ಇನ್ನೂ ಅದು ಸ್ವಾತಂತ್ರ್ಯವನ್ನುಗಳಿಸಿದ್ದರೂ ಅಲ್ಲಿ ಆ ಪೋರ್ಚುಗೀಸರ ಕೈವಾಡವಿನ್ನೂ ಸಂಪೂರ್ಣವಾಗಿ ತಪ್ಪಿಲ್ಲ. ಅವರ ಭಯಾತ್ಮಕ ಕೃತ್ಯಗಳಿನ್ನೂ ಅಲ್ಲಿ ನಿಂತಿಲ್ಲ. ಪೋರ್ಚುಗೀಸರ ಕೆಲವು ದಳ್ಳಾಳಿಗಳಿನ್ನೂ ಅಲ್ಲೇ ಇದ್ದಾರೆ. ಅವರ ಕೈವಾಡವೋ ಅಥವಾ ಇನ್ನಾವ ಕಾರಣವೋ ಅಲ್ಲಿ ಹೋದ ವರುಷ ಒಂದು ಬಾಂಬು ಆಸ್ಫೋಟನೆ ಆಯಿತು. ಇದನ್ನೆಲ್ಲಾ ನೋಡಿದರೆ ಅಲ್ಲಿ ಯಾವ ಕಾಲಕ್ಕೆ ಏನಾಗುವುದೋ ಎಂಬುದನ್ನು ಹೇಳಲಿಕ್ಕೆ ಬರುವುದಿಲ್ಲ. ಪರಿಸ್ಥಿತಿಯು ಇಷ್ಟು ಗಂಭೀರವಾಗಿರುವಾಗಲೇ ಮಹರಾಷ್ಟ್ರ ವಿಧಾನ ಸಭೆಯವರು ಇಷ್ಟು ಆತುರಾತುರವಾಗಿ ಇಂಥ ಒಂದು ಅವಸರ ನಿರ್ಣಯವನ್ನು ಮಾಡತಕ್ಕ ಪ್ರಮೇಯವೇನಿತ್ತು ? ಇದನ್ನು ನೋಡಿದರೆ ನನಗೆ ಏನೋ ಒಂದು ಭಾರಿ ಹಿನ್ನೆಲೆ ಇರಬೇಕೆಂದು ಭಯವಾಗುತ್ತಿದೆ. ಆ ಮಹರಾಷ್ಟ್ರೀಯರು ಹೀಗೆ ಇಷ್ಟು ಆತುರಾತುರವಾಗಿ ಗೋವೆಯು ಮಹಾರಾಷ್ಟ್ರದಲ್ಲೇ ವಿಲೀನಿಕರಣವಾಗಬೇಕು ಎಂದು ಒಂದು ನಿರ್ಣಯವನ್ನು ಪಾಸ್ ಮಾಡಿರತಕ್ಕದ್ದನ್ನು ನೋಡಿದರೆ ನನಗೇನು ತೋರುತ್ತಿದೆ ಎಂದರೆ ಅವರು ನಾಳೆ ದಿವಸ ಬೆಳಗಾಂ ಮತ್ತು ಕಾರ್ವಾರ್ ಜಿಲ್ಲೆಗಳು ಮಹರಾಷ್ಟ್ರಕ್ಕೆ ಸೇರತಕ್ಕ ಬಗ್ಗೆ ಅವುಗಳನ್ನು ಕಬಳಿಸಲು ಇದೊಂದು ಒಳ್ಳೆಯ ಮಾರ್ಗ ಎಂತ ಹೀಗೆ ಮಾಡಿದ್ದಾರೆಂದು ನನಗೆ ಕಾಣುತ್ತದೆ. ಶ್ರೀಮಾನ್ ಎ. ಜೆ. ದೊಡ್ಡಮೇಟಿಯವರು ನಿರ್ಣಯವನ್ನು ಮಂಡಿಸತಕ್ಕ ಕಾಲದಲ್ಲಿ ಆ ಮಹಾರಾಷ್ಟ್ರದವರಲ್ಲಿ ರಾಜ್ಯಗಳನ್ನು ಆಕ್ರಮಣ ಮಾಡತಕ್ಕ ಒಂದು ಧೋರಣೆ ಎದ್ದು ಕಾಣುತ್ತಿದೆ ಎಂತ ಹೇಳಿದ್ದರು. ಹಾಗೆ ಅವರು ಹೇಳಿರುವುದಕ್ಕೆ ಸರಿಯಾಗಿ ಈ ದಿವಸ ಇವರು ಮಾಡುತ್ತಿರುವ ಕಾರ್ಯಗಳನ್ನು ನೋಡಿದರೆ ನಿಜವಾಗಿಯೂ ಇವರ ಧೋರಣೆ ಸರ್ವಂ ಭಕ್ಷಯಾಮಿ, ಸಾಗರಂ ಭಕ್ಷಯಾಮಿ ಎಂದು ಎಂದು ಹೇಳುವಂತೆ ಇವರು ಎಲ್ಲವನ್ನೂ ನುಂಗಿ ನೀರುಕುಡಿದು ಈಗ ಸಮುದ್ರಗಳನ್ನೂ ನುಂಗುವುದಕ್ಕೆ ಪ್ರಾರಂಭಮಾಡಿದ್ದಾರೆಂದು ಕಾಣುತ್ತದೆ. ಇಂಥ ಒಂದು ಪರಿಸ್ಥಿತಿಗೆಲ್ಲಾ ಕಾರಣರು

(ಶ್ರೀ ಬಿ. ಭಾಸ್ಕರ ಶೆಟ್ಟಿ)

ಯಾರೆಂದರೆ–ನಮ್ಮ ಸರ್ಕಾರದವರೇ. ಆ ಜನರು ಈ ಸರ್ಕಾರದ ನಿರ್ವೀರ್ಯತೆಯನ್ನು ಕಂಡು ಹೀಗೆಲ್ಲಾ ಮಾಡುತ್ತಿದ್ದಾರೆ. ಆದರೆ ನಮ್ಮ ಇಲ್ಲಿನ ರೋದನವೆಲ್ಲಾ ಒಂದು ಅರಣ್ಯರೋದನವಾಗಿದೆ. ಅಲ್ಲಿ ಪಾರ್ಲಿಯಮೆಂಟಿನಲ್ಲಾದರೂ ನಮ್ಮ ರೋಧನ ಕೇಳತಕ್ಕವರು ಇದ್ದಾರೆಯೇ ಎಂದರೆ ಅಲ್ಲಿಯೂ ಸರಿಯಾದವರಿಲ್ಲ. ಆ ಕೇಂದ್ರ ಕ್ಯಾಬಿನೆಟ್ಟಿನಲ್ಲೂ. ನಮ್ಮ ಸರಿಯಾದ ಒಬ್ಬ ಪ್ರತಿನಿಧಿಯಿಲ್ಲ. ನಮ್ಮ ಸರ್ಕಾರವನ್ನು ಅಲ್ಲಿ ಸರಿಯಾಗಿ ಪ್ರತಿಬಿಂಬಿಸುವಂಥ ಮುಖಂಡರೊಬ್ಬರು ಕೇಂದ್ರದ ಮಂತ್ರಿ ಮಂಡಲದಲ್ಲಿಲ್ಲ.........

Mr. SPEAKER.—Are there any vacancies in Parliamentary seats from Mysore State ?

Sri M. V. RAMA RAO (Minister for Law).—At present, there is a vacancy in Parliament to which election has to be held from Kolar Constituency.

Mr. SPEAKER.—That has to be notified. He says Mysore is not represented in Parliament.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಕೇಂದ್ರಮಂತ್ರಿಮಂಡಲದಲ್ಲಿ ನಮ್ಮ ರೋದನವನ್ನು ಸರಿಯಾಗಿ ಪ್ರತಿಬಿಂಬಿಸತಕ್ಕವರಿಲ್ಲ ಎಂದು ನಾನು ಹೇಳಿದೆನು. ಹೀಗೆ ಮೈಸೂರಿನವರ ಒಂದು ಆಲಸ್ಯಧೋರಣೆ ನೋಡಿಕೊಂಡು ಅವರು ಹೀಗೆಲ್ಲಾ ಮಾಡುತ್ತಿದ್ದಾರೆ. ಅವರ ಉದ್ದೇಶ ನಾಳೆ ಆ ಬೆಳಗಾಂ ಮತ್ತು ಕಾರ್ವಾರಗಳನ್ನು ಕಬಳಿಸಬೇಕೆಂಬುದೇ ಆಗಿರುತ್ತೆಂದು ಸ್ಪಷ್ಟವಾಗುತ್ತಿದೆ.

5-30 P.M.

ಆದ್ದರಿಂದ ಇದನ್ನು ನಾವು ಬಹಳ ಲಘುವಾಗಿ ತೆಗೆದುಕೊಳ್ಳಬಾರದು, ಇನ್ನಾದರೂ ಎಚ್ಚೆತ್ತು ಇದಕ್ಕೆ ಸ್ವಲ್ಪ ಹೆಚ್ಚಿನ ಮಹತ್ವವನ್ನು ಕೊಡಬೇಕು ಎಂದು ನಾನು ಸರ್ಕಾರದವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಈ ವಿಷಯವನ್ನು ಇಷ್ಟು ಲಘುವಾಗಿ ತೆಗೆದುಕೊಳ್ಳಬಾರದು ಅವರು ಒಂದು ದೊಡ್ಡ ಪ್ಲಾನ್ ನಲ್ಲೇ ತಯಾರು ಮಾಡಿ ಈ ವಿಷಯವನ್ನು ಮುಂದಕ್ಕೆ ತಂದಿದ್ದಾರೆ ಮಾತ್ರವಲ್ಲದೆ ಮಹಾರಾಷ್ಟ್ರ ವಿಧಾನಸಭೆಯ ಅಧಿವೇಶನವನ್ನು ಸ್ಪೆಷಲ್ ಆಗಿ ಇದಕ್ಕಾಗಿಯೇ ಕರೆದು ತುರ್ತಾಗಿ ಇಂತಹ ಒಂದು ನಿರ್ಣಯವನ್ನು ಕೈಕೊಂಡಿದ್ದಾರೆ ಇದರಲ್ಲಿ ಬಲವಾದ ಒಂದು ಹಿನ್ನೆಲೆ ಇದೆ ಎಂದು ಮಾನ್ಯ ಮುಖ್ಯಮಂತ್ರಿಗಳಾದ ಶ್ರೀಮಾನ್ ನಿಜಲಿಂಗಪ್ಪನವರಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ, ಇದನ್ನು ಗಂಭೀರವಾಗಿ ಆಲೋಚನೆ ಮಾಡಬೇಕು ಇದರಲ್ಲಿ ಒಂದು ದೊಡ್ಡ ಚಿತ್ರ ನೋಡುವ ಹಾಗೆ ಇದೆ ಎಂದು ಹೇಳುತ್ತೇನೆ. ಕೊಂಕಣಿಗಳ ವಿಷಯ, ಕೊಂಕಣಿ ಭಾಷೆ ವಿಷಯ ಅವರು ಹೇಳಿದರು. ಕೊಂಕಣಿ ಭಾಷೆಯ ವಿಷಯ ತಮಗೂ ಗೊತ್ತಿದೆ, ಕೊಂಕಣಿಗೂ ಮರಾಠಿಗೂ ಬಹಳ ಭಿನ್ನತೆ ಇದೆ, ಕೊಂಕಣಿ ಮಹಾರಾಷ್ಟ್ರದ ಸಹ ಭಾಷೆ ಎಂಬುದನ್ನು ತಾವೂ ಒಪ್ಪುತ್ತೀರಿ. ಕೊಂಕಣಿ ಭಾಷೆ ಮರಾಠಿ ಅಲ್ಲದೆ ಕನ್ನಡ ಭಾಷೆಗಿಂತಲೂ ಮುಂದಾಗಿ ಹುಟ್ಟಿಕೊಂಡಿದೆ ಎಂದು ಹೇಳುತ್ತೇನೆ. ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಕೊಂಕಣಿಗರು ತಮ್ಮ ಲಿಖಿತವನ್ನು ಕನ್ನಡದಲ್ಲಿಯೇ ಬರೆಯುತ್ತಾರೆ ಕೊಂಕಣಿ ಅಂತ ಬೇರೆ ಉಪಯೋಗ ಮಾಡುವುದಿಲ್ಲ ಮಾತ್ರವಲ್ಲದೇ ಮಹಾರಾಷ್ಟ್ರದಲ್ಲಿ ದಕ್ಷಿಣ ಕನ್ನಡ ಜಿಲ್ಲೆ ಉತ್ತರ ಕನ್ನಡ ಜಿಲ್ಲೆಯ ಒಂದು ಒಂದೂವರೆ ಲಕ್ಷ ಜನ ಕನ್ನಡಿಗರು ಕೊಂಕಣಿಯವರು ಇದ್ದಾರೆ. ಗೋವಾದಲ್ಲಿ ಶ್ರೀಮಾನ್ ಎ. ಜಿ. ದೊಡ್ಡಮೇಟಿಯವರು ಹೇಳಿದ ಹಾಗೆ ನೂರಕ್ಕೆ 55 ಜನ ಎಂದರೆ ಸುಮಾರು 4 ಲಕ್ಷ ಚಿಲ್ಲರೆ ಕೊಂಕಣಿಗರು ಇದ್ದಾರೆ. ಅವರೂ ಕೂಡ ಭೌಗೋಲಿಕವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ ಎಲ್ಲಾ ಸಂಬಂಧವನ್ನೂ ಕರ್ನಾಟಕದೊಡನೆ ಇಟ್ಟುಕೊಂಡಿದ್ದಾರೆ ಮಾತ್ರವಲ್ಲದೆ ಗೋವಾ ಇನ್ನೂ ಅಭಿವೃದ್ಧಿ ಹೊಂದಬೇಕಾದರೆ ಇನ್ನೂ ಸಾಂಪತ್ತಿಕವಾಗಿ ಬೆಳೆಯಬೇಕಾದರೆ ಅದರ ಎಲ್ಲಾ ಹಿನ್ನೆಲೆ ಕರ್ನಾಟಕದ ಪ್ರಾಕೃತಿಕ ಸಂಪತ್ತಿಯನ್ನು ಹೊಂದಿಕೊಂಡಿದೆ ಎಂದು ನಾನು ಹೇಳುತ್ತೇನೆ. ಸ್ವಾಮಿ ಗೋವಾ ಬಂದರು ಒಂದು ವೇಳೆ ಮಹಾರಾಷ್ಟ್ರದೊಡನೆ ವಿಲೀನಗೊಂಡಲ್ಲಿ ಗೋವಾ ಬಂದರದ ಸುದ್ದಿಯೇ ಇಲ್ಲದಂತಾಗುತ್ತದೆ. ಗೋವಾ ಬಂದರು ಕರ್ನಾಟಕದ ಸಾಮಾನುಗಳನ್ನು ಕರ್ನಾಟಕದ ರವಾನೆಯನ್ನು ಹೊಂದಿಕೊಂಡಿದೆ ಅದ್ದರಿಂದ ಗೋವಾ ಎಷ್ಟು ಮಾತ್ರಕ್ಕೂ ಮಹಾರಾಷ್ಟ್ರಕ್ಕೆ ಹೊಂದಿಕೊಳ್ಳುವುದು ನ್ಯಾಯವಲ್ಲ. ಮಾತ್ರವಲ್ಲದೆ ಈಗಾಗಲೇ ಗೋವಾ ಜನತೆ ಸಾಧಾರಣವಾಗಿ ನಾಲ್ಕು ಶತಮಾನದಿಂವ ಪೋರ್ಚುಗೀಸರ ಗುಲಾಮಗಿರಿಯ ಸಂಕೋಲೆಯಿಂದ ಆವೃತ್ತರಾಗಿದ್ದರು, ಅವರು ಈಗಲೇ ಪ್ರಜಾಪ್ರಭುತ್ವಕ್ಕೆ

ಅಡಿಯಿಟ್ಟಿದ್ದಾರೆ. ಮದುವೆಯಾಗಬೇಕಾದರೆ ಅನುಕೂಲ ದಾಂಪತ್ಯವಾಗಬೇಕು. ಆ ರೀತಿ ಆಗದೆ ದಾಂಪತ್ಯ ಜೀವನ ಹೊಂದಿಕೊಂಡು ಹೋಗದೇ ಇದ್ದರೆ ಹಿಂದಿನ ಪರಿಸ್ಥಿತಿಯೇ ಉದ್ಭವವಾದೀತು. ಆದ್ದರಿಂದ ಗೋವಾವನ್ನು ಅಲ್ಲಿಯ ಜನತೆ ಪ್ರಜಾಪ್ರಭುತ್ವವನ್ನು ಅರಿತುಕೊಳ್ಳುವ ಮಟ್ಟಿಗಾದರೂ, ಎಂದರೆ, ಹತ್ತು ವರ್ಷಗಳವರೆಗಾದರೂ ಕೂಡ ಯಾವ ಒಂದು ಭಾಗಕ್ಕೂ ಸೇರಿಸದೆ ಸ್ವತಂತ್ರವಾಗಿ ಬಿಡಬೇಕೆಂದು ಹೇಳುತ್ತೇನೆ. ಆಮೇಲೆ ಅಲ್ಲಿನ ಜನತೆ ಎಲ್ಲಿಗೆ ಸೇರಲಿಕ್ಕೆ ಅಪೇಕ್ಷೆ ಪಡುತ್ತಾರೊ ಅಲ್ಲಿಗೆ ಸೇರಿಕೊಳ್ಳಬಹುದು. ಈಗಾಗಲೇ ದೇಶದಲ್ಲಿ ಗಂಡಾಂತರ ಪರಿಸ್ಥಿತಿ ಇರುವಾಗ ಅವಸರದ ಮದುವೆಯನ್ನು ಮಾಡಬಾರದು, ನಮ್ಮ ಮಹಾರಾಷ್ಟ್ರದ ಸ್ನೇಹಿತರೂ ಕೂಡ ಅವರಿಗೆ ಒಳ್ಳೆಯ ಹಿನ್ನೆಲೆ ಇದೆ, ಛತ್ರಪತಿ ಶಿವಾಜಿಯವರ ವಂಶದಿಂದ ಬಂದವರು ಅವರು, ಅವರೂ ಕೂಡ ಈ ವಿಷಯ ವನ್ನು ಚೆನ್ನಾಗಿ, ಆಳವಾಗಿ ಆಲೋಚನೆ ಮಾಡಿ ಕೆಲಸ ಮಾಡಬೇಕು, ಅವರು ಈಗ ಮಾಡಬೇಕೆಂದಿ ರುವ ಕೆಲಸಕ್ಕೆ ಕೈಹಾಕಬಾರದು ಎಂದು ಅವರನ್ನು ಕೇಳಿಕೊಂಡು ಇನ್ನು ಹತ್ತು ವರ್ಷಗಳವರೆಗೂ ಗೋವಾ ಹಾಗೆಯೇ ಉಳಿಯಬೇಕೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಎಸ್. ಎಂ. ಗುರೆಡ್ಡಿ (ಮುದ್ದೇಬಿಹಾಳ್).—ಮಾನ್ಯ ಸಭಾಪತಿಯವರೇ, ಕರ್ಣಾಟಕದ ಜನತೆಯ ಸಲುವಾಗಿ, ಕರ್ಣಾಟಕದ ಗಡಿಯ ಸಲುವಾಗಿ ನಮಗೆ ನ್ಯಾಯವಾಗಿ ದೊರಕಬೇಕಾದ ಪಾಲು ದೊರಕಲಿ ಎಂದು ಹೇಳುವಂತಹ ಒಂದು ಮಹತ್ವದ ಉದ್ದೇಶವನ್ನು ಹೊಂದಿರತಕ್ಕಂತಹ ಹಿರಿಯರು ನಮ್ಮ ಮುಂದೆ ಇರುವಾಗ ಇವತ್ತು ಈ ಪ್ರಶ್ನೆ ಚರ್ಚೆಗೆ ಬಂದಿದೆ. ಈ ದಿನ ಹಿಂದೂ ಸ್ಥಾನದಲ್ಲಿಯೇ ಈಗ ವಾತಾವರಣ ಸರಿಯಾಗಿಲ್ಲ ಎನ್ನತಕ್ಕ ಒಂದು ಮಾತನ್ನು ಬಹಳ ಕಳಕಳಿಯಿಂದ ಹೇಳಬೇಕಾಗಿದೆ. ಈ ಪ್ರಶ್ನೆ ಈ ಸಮಯದಲ್ಲಿ ಬರಬಾರದಾಗಿತ್ತು. ಹಿಂದೂಸ್ಥಾನ ಒಗ್ಗಟ್ಟಿನಿಂದ ಇರಬೇಕು, ಹಿಂದೂಸ್ಥಾನದಲ್ಲಿ ಉತ್ತರದಿಂದ, ದಕ್ಷಿಣದವರೆಗೂ ಜನತೆಯ ಮನೋಭಾವ ಒಂದೇ ಆಗಿರಬೇಕೆಂಬ ಸದುದ್ದೇಶ ನಮ್ಮ ನಾಯಕರಲ್ಲಿ ಇರುವಾಗ ಕೆಲವು ರಾಜ್ಯಗಳ ಜನರು ಒಂದು ಆಕ್ರಮಣ ಮನೋವೃತ್ತಿಯನ್ನು ಪ್ರಕಟ ಮಾಡಿ ಜನರ ಮನಸ್ಸನ್ನು ಕಲ್ಮಷವನ್ನಾಗಿ ಮಾಡಿದ್ದಾರೆ ಇದು ನಿಜವಾಗಿಯೂ ವ್ಯಥೆಪಡುವಂತಹ ಸಂಗತಿ. ನಮ್ಮ ಮೈಸೂರಿನ ನಾಯಕರ ಧೋರಣೆ ಸುಸ್ಪಷ್ಟವಾಗಿದೆ. ನಾವು ನಮ್ಮದೇ ಆದಂತಹ ಗೋವೆಯನ್ನು ಈಗ ಕೇಳುವುದಿಲ್ಲ. ಇನ್ನೂ ಕೆಲಕಾಲ ಅದು ಕೇಂದ್ರದ ಆಡಳಿತದಲ್ಲಿಯೇ ಇರಲಿ, ಅದು ಎಲ್ಲ ರೀತಿಯಿಂದಲೂ ಬೆಳೆಯಲಿ ಅನಂತರ ಅಲ್ಲಿಯ ಜನರು ಎಲ್ಲಿ ಯಾವ ಪ್ರದೇಶಕ್ಕೆ ಹೊಂದಿಕೊಳ್ಳಲು ಅಪೇಕ್ಷಿಸುತ್ತಾರೋ ಅಲ್ಲಿ ಹೋಗಲಿ ಇದರಿಂದ ನಮ್ಮ ನಿಲುವು ಗೋವೆಯ ವಿಷಯದಲ್ಲಿ ಏನು ಎಂಬುದು ಸ್ಪಷ್ಟವಾಗುತ್ತದೆ. ಗೋವೆ ಹಿಂದೂಸ್ಥಾನದ ಒಂದು ಭಾಗ ಅದು ಎಲ್ಲಾ ದೃಷ್ಟಿಯಿಂದಲೂ ಅಭಿವೃದ್ಧಿಯಾಗಬೇಕು, ಅದು ಕುಂಠಿತವಾಗತಕ್ಕ ಕೆಲಸವನ್ನು ಯಾರೊಬ್ಬರೂ, ಯಾವ ತರಹದಿಂದಲೂ ಮಾಡಕೂಡದು ಎಂಬ ಸ್ಪಷ್ಟವಾದ ನಿಲುವನ್ನು ನಮ್ಮ ನಾಯಕರು ತಾಳಿರುವಾಗ ದುರಾದೃಷ್ಟವಶಾತ್ ಕೆಲವು ನಾಯಕರ ಧೋರಣೆ ಬದಲಾದ್ದರಿಂದ ಇವತ್ತು ಸ್ಪಷ್ಟವಾದ ಒಂದು ತೀರ್ಮಾನವನ್ನು ಕೊಡಬೇಕಾದಂತಹ ಪ್ರಸಂಗ ಬಂದಿದೆ. ಇದು ಅನಿವಾರ್ಯವಾಗಿದೆ. ನಮ್ಮ ಹಿಂದೂಸ್ಥಾನದಲ್ಲಿರತಕ್ಕ ಕೆಲವು ನಾಯಕರ ಧೋರಣೆ ಸ್ವಲ್ಪ ವ್ಯತ್ಯಾಸವಾಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಜವಾಬ್ದಾರಿ ಸ್ಥಾನ ದಲ್ಲಿರತಕ್ಕವರು ಇಂತಹ ವಿಷಯದಲ್ಲಿ ಜನರ ಮನಸ್ಸನ್ನು ಕದಡಿಸುವಂಥ ಹೇಳಿಕೆಗಳನ್ನು ಕೊಡುತ್ತಾ ಇರುವುದರಿಂದ ಬಹಳ ವ್ಯಥೆಯಾಗುತ್ತಾ ಇದೆ. ಈ ಮನೋವೃತ್ತಿಯುಳ್ಳ ನಾಯಕರ ಹೇಳಿಕೆಯ ಪರಿಣಾಮವಾಗಿ ನಮ್ಮ ನೆರೆ ರಾಜ್ಯದಲ್ಲಿರತಕ್ಕ ಮಹಾರಾಷ್ಟ್ರದವರ ಮನೋವೃತ್ತಿ ಬದಲಾವಣೆ ಯಾಯಿತು ಎಂದು ನಾನು ತಿಳಿದುಕೊಂಡಿದ್ದೇನೆ. ನಮ್ಮ ರಾಜ್ಯದವರು ಈಗ ದೊಡ್ಡ ಸ್ಥಾನದಲ್ಲಿ ಇದ್ದಾರೆ. ಆದ್ದರಿಂದ ಆಗ ನಮ್ಮ ಕೆಲಸ ಸಾಧಿಸುತ್ತದೆ, ಅದನ್ನು ಗೋವೆಯನ್ನು ಸಾಧಿಸಲಿಕ್ಕೆ ಸಾಧ್ಯ ಎನ್ನುವ ಮನೋವೃತ್ತಿ ಅವರಲ್ಲಿ ಇದ್ದರೂ ಇರಬಹುದು. ದಿವಂಗತ ಪಂಡಿತ ಜವಹರಲಾಲ್ ನೆಹರು ಅವರು ಈ ವಿಷಯದಲ್ಲಿ ಸ್ಪಷ್ಟವಾದ ಧೋರಣೆಯನ್ನು ವ್ಯಕ್ತಪಡಿಸಿದ್ದರು, ಇನ್ನೂ ಹತ್ತು ಅಥವಾ ಅದಕ್ಕಿಂತ ಹೆಚ್ಚು ವರ್ಷ ಗೋವೆ ಸ್ವತಂತ್ರ ಗೋವೆಯಾಗಿರಬೇಕೆಂದು ಅವರು ತಮ್ಮ ನಿಲುವನ್ನು ಸ್ಪಷ್ಟಪಡಿಸಿದ್ದರು. ಅವರ ಆ ಧೋರಣೆಯನ್ನು ಎಲ್ಲ ನಾಯಕರೂ ಅನುಸರಿಸಲು ಒಪ್ಪಿಕೊಂಡು ಸುಮ್ಮನಿದ್ದರು. ಆದರೆ ಇವತ್ತು ಅವರ ಮನೋವೃತ್ತಿ ಬೇರೆಯಾಗಿದೆ. ಈಗ ಸಾಧಿಸಿದರೇ ಆಗುತ್ತದೆ ಮುಂದೆ ಸಾಧ್ಯವಿಲ್ಲ ಎಂಬ ಭಾವನೆ ಕೂಡ ಇದೆ. ಆದ್ದರಿಂದ ಇಂದು ಅವರು ಗೋವಾವನ್ನು ಕೇಳಲಿಕ್ಕೆ ಹತ್ತಿದ್ದಾರೆ. ಆದಕಾರಣ ನಾನು ಹಿಂದೂಸ್ಥಾನದ ಎಲ್ಲಾ ಜನ ಸಾಮಾನ್ಯರನ್ನೂ ಕೇಳಿಕೊಳ್ಳುತ್ತಾ ಇದ್ದೇನೆ ಇಂತಹ ಆಕ್ರಮಣ ಮನೋವೃತ್ತಿ ಮತ್ತೆ ಯಾವ ರಾಜ್ಯದವರಲ್ಲೇ ಇರಲಿ ಅವರಿಗೆ ಸ್ಪಷ್ಟವಾಗಿ ಪಾಠ ಹೇಳಿಕೊಡಿ ಇಂತಹ ಮನೋವೃತ್ತಿಯನ್ನು, ಬುದ್ಧಿಯನ್ನು ಹೊಂದಿರತಕ್ಕ ಜನ ಯೋಗ್ಯ ಸ್ಥಾನದಲ್ಲಿ ಎಂದರೆ ದೊಡ್ಡ ಸ್ಥಾನದಲ್ಲಿ ಇರಲಿಕ್ಕೆ ಯೋಗ್ಯರಲ್ಲ. ಆದಕಾರಣ ನಿಮ್ಮ ಸಂಕುಚಿತ ಭಾವನೆ ಏನಿದೆ ಅದನ್ನು ದಯಮಾಡಿ ಬಿಟ್ಟುಕೊಡಿ, ಇಲ್ಲದೇ ಇದ್ದರೆ ನಿಮ್ಮ ಹೆಚ್ಚಿನ ಸ್ಥಾನ ಏನಿದೆ ಅದನ್ನು ಬಿಟ್ಟುಬಿಡಿ ಎಂದು ಹೇಳಿ ಅವರಿಗೆ ಸ್ಪಷ್ಟವಾಗಿ

(ಶ್ರೀ ಎಸ್. ಎಂ. ಗುರಡ್ಡಿ)

ಇಂದು ಇಲ್ಲಿ ಹೇಳಬೇಕಾಗಿದೆ. ಹಿಂದೂಸ್ಥಾನದಲ್ಲ ಯಾವ ರಾಜ್ಯಕ್ಕಾದರೂ ಆಕ್ರಮಣ ಮನೋವೃತ್ತಿ ಇದ್ದರೆ ಅದು ಮಹಾರಾಷ್ಟ್ರದ ಜನರಲ್ಲಿ ಇದೆ. ಇಂದು ಎಲ್ಲಾ ರಾಜ್ಯಗಳ ಗಡಿ ಸಮಸ್ಯೆಗಳು ಮುಗಿದಂತಾಗಿವೆ. ಆದರೆ ಮಹಾರಾಷ್ಟ್ರಕ್ಕೆ ಹೊಂದಿ ಕೊಂಡಿರುವ ಗಡಿ ಸಮಸ್ಯೆ ಬಗೆಹರಿಯದೆ ಇದೆ. ಈಗ ಅವರು ಬೆಳಗಾಂ ಕೇಳುತ್ತಾರೆ. ನಾಳೆ ಬಿಜಾಪುರ ಕೇಳಬಹುದು. ಇದು ನಿಜವಾಗಿಯೂ ಕೂಡ ಹಿಂದೂಸ್ಥಾನದ ಒಗ್ಗಟ್ಟಿಗೆ ಶ್ರೇಯಸ್ಸು ತರುವ ವಿಚಾರವಲ್ಲ. ಮಹಾರಾಷ್ಟ್ರದ ಮನೋವೃತ್ತಿ ಹೀಗಿದೆ. ಅವರ ಮನೋವೃತ್ತಿ, ಕೂಪ ಮಂಡೂಕದ ಮನೋವೃತ್ತಿಯಂತಿದೆ. ನೆರೆಹೊರೆಯವರ ವಿಚಾರದಲ್ಲಿ ಒಂದು ಒಳ್ಳೆಯ ಮನೋ ಭಾವನೆ ಮಹಾರಾಷ್ಟ್ರದವರು ತಾಳದಿದ್ದರೆ ದೇಶಕ್ಕೆ ಮತ್ತು ರಾಜ್ಯಕ್ಕೆ ಹಿತವಾಗುವುದಿಲ್ಲ. ಕೇವಲ ಗಡಿವಿಸ್ತರಿಸುವುದು ಅವರ ಉದ್ದೇಶವೇ ಹೊರತು ಅದನ್ನು ಬೆಳೆಸಬೇಕು, ರಾಜ್ಯ ಸಂಪೂರ್ಣ ಪ್ರಗತಿ ಹೊಂದಬೇಕೆಂಬ ಭಾವನೆ ಅವರಿಗಿಲ್ಲ. ಶಿವಾಜಿ ಮಹಾರಾಜರ ಉದಾಹರಣೆ ಕೊಟ್ಟು ಅವರು ಅಲ್ಲಿಯವರೆಗೆ ರಾಜ್ಯವನ್ನು ವಿಸ್ತರಿಸಿದ್ದರು, ಇಲ್ಲಿಯವರೆಗೆ ವಿಸ್ತರಿಸಿದ್ದರು ಎಂದು ಹೇಳುತ್ತಿದ್ದಾರೆ. ಕರ್ಣಾಟಕದ ಇತಿಹಾಸ ನೋಡಿದರೆ ನಮ್ಮವರು ಕಾಶ್ಮೀರದವರೆಗೆ ರಾಜ್ಯವನ್ನು ಬೆಳೆಸಿದ್ದರು ಎಂದು ತಿಳಿಯುತ್ತದೆ ಆದರೆ ನಾವು ಮನೋವೃತ್ತಿಯನ್ನು ಹೊಂದಿಲ್ಲ, ನಮ್ಮದು ನ್ಯಾಯವಾದ ಬೇಡಿಕೆ. ನಮ್ಮದು ಅನ್ನುವಂಥಾದ್ದು ನಮಗೆ ಉಳಿಯಲಿ, ಎಲ್ಲಿ ಇದ್ದರೂ ಹಿಂದೂಸ್ತಾನದಲ್ಲಿದೆ ಎಂಬ ಭಾವನೆ ಹೊಂದಿದಂಥ ನಮಗೆ, ಮಹಾರಾಷ್ಟ್ರದವರಿಂದ ಪದೇ ಪದೇ ನಮಗೆ ಗಡಿಯ ಸಂಬಂಧ ತ್ರಾಸ ನಡವೇ ಇದೆ. ನೆರೆ ಪ್ರಾಂತದವರಾದ ಮಹಾರಾಷ್ಟ್ರದವರನ್ನು ಕೇಳಿಕೊಳ್ಳುವದಿಷ್ಟೆ ಗೋವಾ ಜನತೆಯ ಮೇಲೆ ಪ್ರೇಮವಿದ್ದರೆ, ಅವರ ಕಲ್ಯಾಣವಾಗುವಂತೆ ಎಲ್ಲ ರೀತಿಯಿಂದ ಅವರ ಬೆಳವಣಿಗೆಯಾವಂತೆ ಅವರಿಗೆ ಪ್ರೋತ್ಸಾಹ ಕೊಡಿ, ಆ ಮನೋವೃತ್ತಿ ಬೆಳೆಸಿಕೊಳ್ಳಿ ಎಂದು ಹೇಳ ಬೇಕಾಗಿದೆ. ನಾವು ಗೋವಾವರಿಗೆ ಈ ದಿವಸ ಬೇಕಾದ ವಿದ್ಯುಚ್ಛಕ್ತಿಯನ್ನು ಕೊಡುವುದಕ್ಕೆ ಮನಸ್ಸು ಮಾಡಿದ್ದೇವೆ. ಹಾಗೆ ಅವರಿಗೆ ತಾವೂ ಬೇಕಾದ ಸಹಾಯ ಮಾಡಿ ಅವರು ಉಳಿದ ರಾಜ್ಯಗಳ ಮಟ್ಟಕ್ಕೆ ಬರುವ ಹಾಗೆ ಮಾಡಬೇಕೇ ಹೊರತು ಅವರ ಮನಸ್ಸನ್ನು ಕಲುಷಿತಮಾಡ ಬಾರದು. ಆದುದರಿಂದ ಶ್ರೀಮಾನ್ ದೊಡ್ಡಮೇಟಿಯವರು ತಂದಿರುವ ಸೂಚನೆಗೆ ಸಂಪೂರ್ಣ ಬೆಂಬಲ ಕೊಡುತ್ತೇನೆ, ಅಲ್ಲದೆ ಈ ಸಭೆಯ ಮುಂದಿರುವ ಈ ರೆಜಲ್ಯೂಶನ್‌ಕ್ಕೆ (ಸೂಚನೆಗೂ) ಕೂಡ ಒಮ್ಮತದಿಂದ ಸರ್ವರೂ ಬೆಂಬಲ ನೀಡಬೇಕೆಂದು ಪ್ರಾರ್ಥಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† **Sri V. M. DEO.**—Sir, In the final analysis the present situation that has arisen boils down to a quarrel between the All India Congress and the Maharashtra Government whereby all tenents regarding (1) the code of conduct of the party or any party and (2) the value attached to keep its word (10 years as per Parliament Board decision) will be in doubt. Anything done now will be a sanction to strong arm methods by the Central Government which can only lead to emotional disintegration of our land. Many minorities are under duress in Maharashtra and unable to express themselves without fear. By maintaining the present position for ten years, the present uncongenial atmosphere will return to normalcy and only then the peoples' wishes can be ascertained.

Finally, Goa is the vatican of the East. With the intolerance and strong arm methods of present day Maharashtrian leaders and the vitiated atmoshpere. this Vatican will be neturalised. Only with Karnatak which follows the principle of live and let live human values can have meaning.

Now, there is another aspect to be considered, particularly in the context of the possibility of foreign aggression. In this particular context, I feel particularly because there may be lack of confidence in the people regarding the leadership of the Central Government .....

Mr. SPEAKER.—The Hon'ble Members feelings are good but misplaced. I am not concerned with the policies of the Central Government.

Sri V. M. DEO.—Sir, action against the Defence Minister is definitely called for in view of the fact......

Mr. SPEAKER.—I am not here sitting in judgement over the central Ministers. The Hon'ble Member is going from one wrong point to another. How are we concerned with all that ?

Sri V. M. DEO.—In the beginning it was he who raised this point again and again though it was brought to his notice that the Parliamentary Board has taken a decision not to rake up this point for the next 10 years.

Mr. SPEAKER.—The Parliamentary Board will deal with it. Why should I allow a discussion about it on the Floor of the House.

Sri V. M. DEO.—These are the honest opinions which I have to express. I have done, Sir.

† ಶ್ರೀ ಎಸ್. ಎಸ್. ಪಾಟೀಲ್ (ಸದಲ್ಗ).—ಮಾನ್ಯ ಸಭಾಪತಿಯವರೇ, ನನಗೆ ಕನ್ನಡ ಚೆನ್ನಾಗಿ ಮಾತನಾಡುವುದಕ್ಕೆ ಬರುವುದಿಲ್ಲ. ಹೇಗಾದರೂ ಮಾಡಿ ನನ್ನ ಮಾತೃಭಾಷೆಯಾದ ಕನ್ನಡದಲ್ಲೇ ನನ್ನ ಅಭಿಪ್ರಾಯ ತಿಳಿಸಲು ಪ್ರಯತ್ನಪಡುತ್ತೇನೆ. ಅದನ್ನು ದಯೆಯಿಟ್ಟು ಹೇಗಾದರೂ ಅರ್ಥಮಾಡಿಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಹಿಂದೆ ಈ ವಿಶಾಲ ದೇಶದಲ್ಲಿ ಹಿಂದೂ, ಮುಸ್ಲಿಂ, ಸ್ಪೃಶ್ಯರು ಮತ್ತು ಅಸ್ಪೃಶ್ಯರು ಎಂದು ನೂರಾರು ವರ್ಷಗಳಿಂದ ಪಂಗಡಗಳಿದ್ದುವು. ನಂತರ ಅದರ ಫಲವಾಗಿ ಪಾಕೀಸ್ತಾನ ಮತ್ತು ಹಿಂದೂಸ್ತಾನ ಎಂದು ನಮ್ಮ ದೇಶ ಎರಡು ಭಾಗವಾಯ್ತು. ಅದರ ಮೇಲೆ ಮಹಾರಾಷ್ಟ್ರದವರು ತಾವು ಹೆಚ್ಚು ಪ್ರದೇಶವನ್ನು ಬರಮಾಡಿಕೊಳ್ಳಲು ತಮ್ಮ ಬೇಡಿಕೆಯನ್ನು ಹೆಚ್ಚಿಸುತ್ತಿದ್ದಾರೆ. ಅವರಿಗೆ ಒಂದು ಕಡೆ ಬೆಳಗಾಂ, ಕಾರವಾರಗಳ ಮೇಲೂ ಮತ್ತೊಂದು ಕಡೆ ನಿಪ್ಪಾಣಿ, ಬಿದರೆ ಮುಂತಾದ ಪ್ರಾಂತಗಳ ಮೇಲೂ ಕಣ್ಣು ಬಿದ್ದು ಸಾಮ್ರಾಜ್ಯಶಾಹಿ ಮನೋವೃತ್ತಿಯನ್ನೇನು ಅವರು ಬೆಳೆಸುತ್ತಿದ್ದಾರೆ ಅದನ್ನು ಸ್ವಲ್ಪ ಕಡಮೆ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ನಮ್ಮ ಕೂಗು ಇಲ್ಲಿಗೇ ನಿಲ್ಲುವುದಿಲ್ಲ, ಬೇಕಾದರೆ ದೆಹಲಿಯವರೆಗೂ ಹೋಗೋಣ, ದೇಶದ ಹಿತದೃಷ್ಟಿಯಿಂದ ನಾವು ಹೇಳುವುದು.

Sri V. S. PATIL.—Sir, I request my Hon'ble Friend to speak in Marathi because he is educated in Marathi and speaks fluently in Marathi.

Sri H. R. KESHAVAMURTHY.—Sir, we would rather welcome faulty Kanarese on the floor of the Karnatak Assembly.

ಶ್ರೀ ಎಸ್. ಎಸ್. ಪಾಟೀಲ್.—ಯಾವುದೇ ದೇಶವಾಗಲಿ ಅದರ ಬೆಳವಣಿಗೆಗೆ, ಆರ್ಥಿಕ ಉನ್ನತಿಗೆ ಸಾಕಷ್ಟು ಪ್ರೋತ್ಸಾಹ ಕೊಡದಿದ್ದರೆ ನಮ್ಮ ದೇಶ ದುಷ್ಕಾಲಕ್ಕೆ ತುತ್ತಾಗಬಹುದು.

Mr. SPEAKER.—The House will now adjourn to meet at 1 p. m. on Monday.

The House adjourned at Six of the Clock to meet again at One of the Clock on Monday, the 15th March 1965.

W.D 4771—GPB—500—8-7-1965